
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ 15 ಎಸೆತದಲ್ಲಿ 50 ರನ್ ಬಾರಿಸುವ ಮೂಲಕ ದಾಖಲೆ ಬರೆದ ಸನ್ ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ...

19 ಏಪ್ರಿಲ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 40 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮಹಿಳಾ ಮೀಸಲು: ವಾಗ್ದಾನದಿಂದ ಇತಿಹಾಸದತ್ತ » 2



ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಿ » 3



ಜೆಜೆಎಂ ಕಾಮಗಾರಿಗಳಿಗೆ ಅನುದಾನದ ಕೊರತೆ » 4

# ಮಹಿಳೆಯರ ಕ್ಷಮೆಯಾಚಿಸಿದ ಮೋದಿ

## ಮಹಿಳಾ ಮೀಸಲಾತಿ ಮಸೂದೆಗೆ ಸೋಲು | ಕಾಂಗ್ರೆಸ್‌ಗೆ ಶಾಪ ಖಚಿತ ಎಂದು ವಾಗ್ದಾಳಿ

• ಪ್ರಜೋದಯ ವರದಿ

**ನವದೆಹಲಿ:** ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆ ಸೋಲಿಗೆ ಕಾಂಗ್ರೆಸ್ ಹಾಗು ಅದರ ಮಿತ್ರಪಕ್ಷಗಳೇ ಕಾರಣವಾಗಿದ್ದು, ದೇಶದ ಮಹಿಳೆಯರಲ್ಲಿ ನಾನು ಕ್ಷಮೆಯಾಚಿಸುತ್ತೇನೆಂದು ಪ್ರಧಾನಿ ನರೇಂದ್ರ ಮೋದಿ ಅವರು ಕಿಡಿಕಾರಿದರು.

ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು 850ಕ್ಕೆ ಏರಿಸುವ ಹಾಗು 2029ರ ಚುನಾವಣೆಯಿಂದ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಸೂದೆಗೆ ಸಂಸತ್‌ನಲ್ಲಿ ಹಿನ್ನಡೆಯುಂಟಾದ ಹಿನ್ನಲೆಯಲ್ಲಿ ಶನಿವಾರ ರಾತ್ರಿ ದೇಶವನ್ನುದ್ದೇಶಿಸಿ ಮಾತನಾಡಿದರು.

ದೇಶದ ಮಹಿಳೆಯರು ಕಾಂಗ್ರೆಸ್ ಅನ್ನು ಯಾವ ಕಾರಣಕ್ಕೂ ಕ್ಷಮಿಸುವುದಿಲ್ಲ. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ತಮ್ಮ ದ್ವೇಷ ಮತ್ತು ಕ್ಷುಲ್ಲಕ ರಾಜಕೀಯದಿಂದ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಹಳಿ ತಪ್ಪಿಸಿವೆ. 2023ರಲ್ಲಿ ನಾವು ನಾರಿ ಶಕ್ತಿ ವಂದನಾ ಅಧಿ ನಿಯಮವನ್ನು ಅಂಗೀಕರಿಸಿದ್ದೇವು. ಈ ತಿಂಗಳ 16ರಂದು ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವತ್ತ ನಾವು ಐತಿಹಾಸಿಕ ಹೆಜ್ಜೆ ಇಟ್ಟಿದ್ದೆವು. ಅದನ್ನು ಬೆಂಬಲಿಸುವಂತೆ



ಎಲ್ಲಾ ರಾಜಕೀಯ ಪಕ್ಷಗಳಿಗೆ ವೈಯಕ್ತಿಕವಾಗಿ ಮನವಿ ಮಾಡಿದ್ದೆ. ನೀವೇ ಇದರ ಕ್ರೆಡಿಟ್ ತೆಗೆದುಕೊಳ್ಳಬಹುದು. ನನಗೆ ಯಾವುದೇ ಆಕ್ಷೇಪವಿಲ್ಲ ಎಂದೂ ಸ್ಪಷ್ಟವಾಗಿ ಹೇಳಿದ್ದೆ. ಸಾಮಾನ್ಯ ಕುಟುಂಬಗಳ ಸಹೋದರಿಯರು ಹೆಚ್ಚಿನ ಸಂಖ್ಯೆಯಲ್ಲಿ ಸಂಸತ್ತು ಮತ್ತು ವಿಧಾನಸಭೆಗಳಿಗೆ ಬರಬೇಕೆಂಬುದು ನಾನು ಬಯಸಿದ್ದೆ. ಆದರೆ, ದುರದೃಷ್ಟವಶಾತ್ ಈ ಉದಾತ್ತ ಪ್ರಯತ್ನವನ್ನು ಡಿಎಂಕೆ ಮತ್ತು ಕಾಂಗ್ರೆಸ್ ಹಳಿತಪ್ಪಿಸಿವೆ. ಈ ಮಸೂದೆಯನ್ನು ಅವರು ದ್ವೇಷ ಮತ್ತು ಕ್ಷುಲ್ಲಕ ರಾಜಕೀಯದ ಗುರಿಯಾಗಿಸಿಕೊಂಡರೆಂದು ಮೋದಿ ಗುಡುಗಿದ್ದಾರೆ.

**ಕಾಂಗ್ರೆಸ್‌ಗೆ ಮಹಿಳೆಯರ ಏಳಿಗೆ ಬೇಕಿಲ್ಲ**

ಕಾಂಗ್ರೆಸ್ ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳುತ್ತದೆ ಎಂದು ಭಾವಿಸಿದ್ದೆ. ಆದರೆ ಆ ಅವಕಾಶವನ್ನು ಪಕ್ಷ ಕಳೆದುಕೊಂಡಿದೆ. ಕಾಂಗ್ರೆಸ್ಸಿಗರು ಕುಟುಂಬದ ಮಹಿಳೆಯರನ್ನು ಬೆಳೆಯಲು ಬಿಡುವುದಿಲ್ಲ. ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ತನ್ನ ಅಸ್ತಿತ್ವ ಕಳೆದುಕೊಂಡಿದ್ದು ಜೀವಂತವಾಗಿರಲು ಪ್ರಾದೇಶಿಕ ಪಕ್ಷಗಳನ್ನು ಅವಲಂಬಿಸಿದೆ. ಮಹಿಳಾ ಮೀಸಲಾತಿ ವಿಚಾರ ಬಂದಾಗ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ತಮ್ಮ ನಿಜವಾದ ಮುಖವಾಡ ಬಯಲು ಮಾಡಿವೆ. ಮಹಿಳೆಯರ ಏಳಿಗೆ ಸಹಿಸದ ಕಾಂಗ್ರೆಸ್ ಮಸೂದೆ ಕುರಿತು ಆಧಾರ ರಹಿತ ಆರೋಪ ಮಾಡಿದೆ. ಭಾರತ ಸ್ವಾತಂತ್ರ್ಯ ಸಾಧಿಸಿ 7 ದಶಕಗಳು ಕಳೆದಿವೆ. ಭಾರತದೊಂದಿಗೆ ಸ್ವಾತಂತ್ರ್ಯ ಪಡೆದ ಅನೇಕ ರಾಷ್ಟ್ರಗಳು ಈಗ ಅಭಿವೃದ್ಧಿ ಹೊಂದಿವೆ. ಆದರೆ ಭಾರತ ಇನ್ನೂ ಅಭಿವೃದ್ಧಿ ಸಾಧಿಸದೇ ಇರಲು ಕಾಂಗ್ರೆಸ್‌ನ ಈ ರೀತಿಯ ವರ್ತನೆಗಳೇ ಕಾರಣವೆಂದು ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದರು.

> **ಮಹಿಳಾ ಪ್ರಗತಿಗಾಗಿ ನಮ್ಮ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ ಯಶಸ್ವಿಯಾಗಲಿಲ್ಲ. ಅದಕ್ಕಾಗಿ ನಾನು ರಾಷ್ಟ್ರದ ಎಲ್ಲಾ ತಾಯಂದಿರು ಮತ್ತು ಸಹೋದರಿಯರಲ್ಲಿ ಕ್ಷಮೆ ಕೇಳುತ್ತೇನೆ. ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡ ವಿರೋಧ ಪಕ್ಷಗಳು ಈ ಮಸೂದೆ ಅಂಗೀಕಾರವಾಗದೆ ಇದ್ದುದಕ್ಕೆ ಸಂಭ್ರಮಿಸಿದ್ದು ವಿಪರ್ಯಾಸ.**
> **-ನರೇಂದ್ರ ಮೋದಿ, ಪ್ರಧಾನಿ**

**ಕ್ಷೇತ್ರ ಪುನರ್‌ವಿಂಗಡಣೆ ಸಮರ್ಥನೆ**

ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನು ಬೆಂಬಲಿಸಿ ಮಾತನಾಡಿದ ಪ್ರಧಾನಿ ಮೋದಿ, ರಾಜ್ಯಗಳಿಗೆ ಹೆಚ್ಚಿನ ಶಕ್ತಿ ತುಂಬುವ ಕ್ಷೇತ್ರ ಪುನರ್ ವಿಂಗಡಣೆಗೆ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಎಸ್‌ಪಿ ಪಕ್ಷಗಳು ವಿರೋಧ ವ್ಯಕ್ತಪಡಿಸಿ ತಮ್ಮ ರಾಜ್ಯದ ಜನರಿಗೆ ಅನ್ಯಾಯ ಮಾಡಿದ್ದಾರೆಂದು ಅಸಮಧಾನ ಹೊರಹಾಕಿದರು.

ಡಿಎಂಕೆ ತಮಿಳುನಾಡಿನ ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚಿಸಿಕೊಳ್ಳುವ ಅಪೂರ್ವ ಅವಕಾಶವನ್ನು ಕಳೆದುಕೊಂಡಿತು. ಹಾಗೆಯೇ ಬಂಗಾಳಿ ಜನರ ರಕ್ಷಕ ಎಂದು ಹೇಳಿಕೊಳ್ಳುವ ಟಿಎಂಸಿ ಕೂಡ ಕ್ಷೇತ್ರ ಪುನರ್‌ವಿಂಗಡನೆಯನ್ನು ವಿರೋಧಿಸಿ ಅನ್ಯಾಯ ಎಸಗಿದೆ ಎಂದರು.

ತಮ್ಮ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮತ್ತೆ ಮಂಡಿಸುವ ತನ್ನ ಪ್ರಯತ್ನವನ್ನು ಮುಂದುವರೆಸಲಿದೆ. ಸಂಸತ್ತಿನಲ್ಲಿ ನಮಗೆ ತಾತ್ಕಾಲಿಕ ಹಿನ್ನಡೆಯಾಗಿರ ಬಹುದು. ಆದರೆ ದೇಶದ ಸಮಸ್ತ ಮಹಿಳೆಯರ ಆಶೀರ್ವಾದದಿಂದ ಮತ್ತೆ ಈ ಮಸೂದೆ ಯನ್ನು ಸಂಸತ್ತಿನಲ್ಲಿ ಮಂಡಿಸಿ ಅದನ್ನು ಕಾನೂನಾಗಿ ಜಾರಿಗೊಳಿಸಲಾಗುವುದೆಂದು ಪ್ರಧಾನಿ ಮೋದಿ ಇದೇ ವೇಳೆ ವಾಗ್ದಾನ ಮಾಡಿದರು.

# ಬೇಲೂರು ಪುರಸಭೆ: ಬಹುಮತ ಇದ್ದರೂ ಕಾಂಗ್ರೆಸ್ ತಳಮಳ

## ಜೋರಾದ ರೆಸಾರ್ಟ್ ರಾಜಕಾರಣ | ಬಿಜೆಪಿ ಸದಸ್ಯರಿಗೆ ದುಂಬಾಲು

• ಪ್ರಜೋದಯ ವರದಿ



**ಬೇಲೂರು:** ಪುರಸಭೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದಿದ್ದರೂ ಆಂತರಿಕ ಕಚ್ಚಾಟದಿಂದಾಗಿ ಅಧ್ಯಕ್ಷ ಸ್ಥಾನಕ್ಕಾಗಿ ಬಿಜೆಪಿ ಸದಸ್ಯರಿಗೆ ದುಂಬಾಲು ಬೀಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ನಡೆಯುತ್ತಿದ್ದು, ಇಬ್ಬರು ರೆಸಾರ್ಟ್ ರಾಜಕಾರಣಕ್ಕೆ ತೆರಳಿದರೆ ಮತ್ತೊಬ್ಬ ಸದಸ್ಯ ತಮ್ಮನ್ನು ಬೆಂಬಲಿಸುವಂತೆ ಬಿಜೆಪಿ ಸದಸ್ಯನ ಮನೆ ಬಾಗಿಲು ತಟ್ಟುತ್ತಿದ್ದಾರೆ. ಕಳೆದ ಬಾರಿ ಪುರಸಭೆಯ 23 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 17 ಸ್ಥಾನ ಗಳಿಸಿ ಬಹುಮತದೊಂದಿಗೆ ಅಧಿಕಾರ ಗದ್ದೆಗೆ ಏರಿತ್ತು. ಆರಂಭದಲ್ಲಿ ಎಲ್ಲಾ ಸರಿಯಿತ್ತಾದರೂ ನಂತರದಲ್ಲಿ ಒಳ ಜಗಳ, ಅಧಿಕಾರ ಹಂಚಿಕೆಯ ಕಿತ್ತಾಟದಿಂದಾಗಿ ಬಹುಮತವಿದ್ದರೂ ಅಧ್ಯಕ್ಷ ಸ್ಥಾನ ಪಡೆಯಲು ಕಿತ್ತಾಡುವ ಸ್ಥಿತಿ ನಿರ್ಮಾಣವಾಗಿದೆ. ಅಧ್ಯಕ್ಷ ಸ್ಥಾನದ ವಿಚಾರಕ್ಕೆ ಅಶೋಕ್ ಅವರು ನ್ಯಾಯಾಲಯ ಮೆಟ್ಟಿಲೇರಿದ್ದು ಕಾಂಗ್ರೆಸ್‌ಗೆ ಭಾರೀ ಹಿನ್ನಡೆಯುಂಟು ಮಾಡಿದೆ.

**ಆಂತರಿಕ ಕಲಹ:** ಕಾಂಗ್ರೆಸ್ ಸದಸ್ಯರ ನಡುವೆ ಅಧ್ಯಕ್ಷ ಸ್ಥಾನದ ಹಂಚಿಕೆ ಅಥವಾ ನಾಯಕತ್ವದ ವಿಚಾರದಲ್ಲಿ ಭಿನ್ನಾಭಿಪ್ರಾಯ ತಲೆದೂರಿದೆ. ಒಬ್ಬರಿಗೊಬ್ಬರು ಹೊಂದಾಣಿಕೆ ಮಾಡಿಕೊಳ್ಳದ ಕಾರಣ, ಸ್ವಪಕ್ಷದವರನ್ನೇ ಸೋಲಿಸಲು ಗುಂಪು ರಾಜಕಾರಣ ಹಾಗು ತಂತ್ರ ಪ್ರತಿ ತಂತ್ರಗಳನ್ನು ರೂಪಿಸಲಾಗುತ್ತಿದೆ. ಆಂತರಿಕ ಭಿನ್ನಾಭಿಪ್ರಾಯ, ಒಳ ಜಗಳ ಹಾಗು ಬಣ ರಾಜಕೀಯದಿಂದಾಗಿ ಪುರಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರ ಒಗ್ಗಟ್ಟು ಮುರಿದುಬಿದ್ದಿದೆ.

ಬಿಜೆಪಿ ಮೊರೆ ಹೋದ ಬಿ.ಗಿರೀಶ್

ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಅಕ್ರಮ್ ಪಾಷಾ ಕಾಂಗ್ರೆಸ್, ಜೆಡಿಎಸ್ ಹಾಗು ಬಿಜೆಪಿಯ ಕೆಲ ಸದಸ್ಯರನ್ನು ಕಟ್ಟಿಕೊಂಡು ರೆಸಾರ್ಟ್‌ಗೆ ತೆರಳಿದ್ದಾರೆ ಎನ್ನಲಾಗಿದೆ. ಮತ್ತೋರ್ವ ಆಕಾಂಕ್ಷಿ ಬಿ.ಗಿರೀಶ್ ಕೂಡ ಸದಸ್ಯರ ಮನವೊಲಿಸುವ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಇದು ಸಾಲದು ಎಂಬಂತೆ ಏಕೈಕ ಬಿಜೆಪಿ ಸದಸ್ಯ ಪ್ರಭಾಕರ್ ಅವರ ಮನೆ ಬಾಗಿಲು ತಟ್ಟಿ ಸಹಕರಿಸುವಂತೆ » ನಾಲ್ಕನೇ ಪುಟದಲ್ಲಿ

# ಜೈಲಿನಿಂದ ಪರಾರಿಯಾಗಿದ್ದ ಖೈದಿ 15 ವರ್ಷದ ಬಳಿಕ ಸೆರೆ

## ಗೋವಾದಲ್ಲಿ ಪತ್ತೆಹಚ್ಚಿದ ಜಿಲ್ಲಾ ಪೊಲೀಸರು

• ಪ್ರಜೋದಯ ವರದಿ



**ಹಾಸನ:** ಸಕಲೇಶಪುರ ಜೈಲಿನಿಂದ 15 ವರ್ಷಗಳ ಹಿಂದೆ ಪೊಲೀಸರ ಕಣ್ಣು ತಪ್ಪಿಸಿ ಪರಾರಿಯಾಗಿದ್ದ ವಿಚಾರಣಾಧೀನ ಖೈದಿಯನ್ನು ಜಿಲ್ಲಾ ಪೊಲೀಸರು ಕೊನೆಗೂ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಗೋವಾದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿ ಚನ್ನಕೇಶವ ಅಲಿಯಾಸ್ ಕೇಶವ, ಅಲಿಯಾಸ್ ಸುರೇಶ್‌ನ್ನು ವಶಕ್ಕೆ ಪಡೆದು ಮತ್ತೆ ಜೈಲಿಗೆ ಕಳುಹಿಸಿದ್ದಾರೆ.

ಸಕಲೇಶಪುರ ತಾಲ್ಲೂಕಿನ ನಲ್ಲುಲ್ಲಿ ಗ್ರಾಮದ ಚನ್ನಕೇಶವ ವಿರುದ್ಧ 2011ರಲ್ಲಿ ಸಿಆರ್ ನಂ.45/2011 ಪ್ರಕರಣ ದಾಖಲಾಗಿದ್ದು, ಭಾರತೀಯ ದಂಡ ಸಂಹಿತೆಯ 376, 307, 394 ಹಾಗು 34 ಕಲಂಗಳಡಿ ಬಂಧಿಯಾಗಿದ್ದನು. ಬಳಿಕ ಸಕಲೇಶಪುರ ಜೈಲಿನಿಂದ ತಪ್ಪಿಸಿಕೊಂಡು ತಲೆಮರೆಸಿಕೊಂಡಿದ್ದ ಆತ, ಹಲವು ವರ್ಷಗಳಿಂದ ಪೊಲೀಸರ ಪತ್ತೆಗೆ ಸಿಗದೇ ಅಡಗಿದ್ದ.

ಪರಾರಿಯಾಗಿದ್ದ ಅವಧಿಯಲ್ಲಿ ಆರೋಪಿ ಮುಂಬೈ ಸೇರಿ ವಿವಿಧ ಮಹಾನಗರಗಳಲ್ಲಿ ಹೋಟೆಲ್‌ಗಳಲ್ಲಿ ಕೆಲಸ ಮಾಡಿಕೊಂಡು ಗುರುತು ಮರೆಮಾಚಿಕೊಂಡು ಬದುಕುತ್ತಿದ್ದನೆಂದು ತಿಳಿದುಬಂದಿದೆ. ಇತ್ತೀಚೆಗೆ ಗೋವಾದ ಒಂದು ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಲಭ್ಯವಾಗಿದ್ದು, ತಕ್ಷಣ ಕಾರ್ಯಾಚರಣೆ ಕೈಗೊಳ್ಳಲಾಯಿತು.

ಜಿಲ್ಲಾ ಪೊಲೀಸ್‌ವರಿಷ್ಠಾಧಿಕಾರಿ ಶುಭಾನ್ವಿತಾ ಅವರ ಮಾರ್ಗದರ್ಶನದಲ್ಲಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ತಮ್ಮಯ್ಯ ಹಾಗು ಶ್ರೀನಿಧಿ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಿ ಗೋವಾಕ್ಕೆ ತೆರಳಿದ ಪೊಲೀಸರು ಸೂಕ್ಷ್ಮವಾಗಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದರು.

ಬಂಧಿತನನ್ನು ಹಾಸನಕ್ಕೆ ಕರೆತಂದು ಕಾನೂನು ಕ್ರಮಗಳನ್ನು ಪೂರ್ಣಗೊಳಿಸಿ ಮತ್ತೆ ಜೈಲಿಗೆ ಕಳುಹಿಸಲಾಗಿದೆ. ಈ ಮೂಲಕ ದೀರ್ಘಕಾಲದಿಂದ ಬಾಕಿ ಉಳಿದಿದ್ದ ಪ್ರಕರಣಕ್ಕೆ ಮಹತ್ವದ ತಿರುವು ದೊರೆತಿದೆ. ಕಾರ್ಯಾಚರಣೆಯಲ್ಲಿ ಕಾನ್ಸ್‌ಟೇಬಲ್‌ಗಳಾದ ರವಿ ಕಬ್ಬತ್ತಿ, ಸೋಮಶೇಖರ ಹಾಗು ಬಸವರಾಜು ಅವರು ಪ್ರಮುಖ ಪಾತ್ರವಹಿಸಿದ್ದು, ಅವರ ಕಾರ್ಯಕ್ಷಮತೆಯನ್ನು ಹಿರಿಯಅಧಿಕಾರಿಗಳು ಪ್ರಶಂಸಿಸಿದ್ದಾರೆ.

## ಶ್ವಾನದಳ ನೆರವಿನಿಂದ ಕಾಡಾನೆ ಪತ್ತೆ: 3ನೇ ದಿನದ ಕಾರ್ಯಾಚರಣೆ ಯಶಸ್ವಿ

# ಪರಾರಿಯಾಗಿದ್ದ ಒಂಟಿಕೋರೆ ಪುಂಡಾನೆ ಕೊನೆಗೂ ಸೆರೆ

• ಪ್ರಜೋದಯ ವರದಿ



**ಹಾಸನ:** ರೈತನನ್ನು ಬಲಿ ಪಡೆದು, ಸೆರೆ ಸಿಕ್ಕಬಳಿಕ ಸಾಕಾನೆಗಳೊಂದಿಗೆ ಕಾಳಗ ನಡೆಸಿ ಪರಾರಿಯಾಗಿದ್ದ ಒಂಟಿಕೋರೆ ಪುಂಡಾನೆಯನ್ನು 3ನೇ ದಿನದ ಕಾರ್ಯಾಚರಣೆಯಲ್ಲಿ ಶನಿವಾರ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ತಂಡ ಯಶಸ್ವಿಯಾಗಿದೆ.

ಇದೇ ಮೊದಲ ಬಾರಿಗೆ ಶ್ವಾನದಳ ನೆರವಿನಿಂದ ಕಾಡಾನೆ ಇರುವ ಜಾಗವನ್ನು ಪತ್ತೆ ಹಚ್ಚಲಾಯಿತು. ಬೇಸಿಗೆ ಆದ್ದರಿಂದ ಆನೆ ಹೆಜ್ಜೆ ಗುರುತು ಪತ್ತೆ ಹಚ್ಚಲು ಸಾಧ್ಯವಾಗದ ಹಿನ್ನಲೆಯಲ್ಲಿ ಬಂಡಿಪುರದಿಂದ ಶ್ವಾನದಳವನ್ನು ಕರೆಸಲಾಯಿತು. ಸಾಕಾನೆಗಳೊಂದಿಗೆ ತೆರಳಿದ ವೈದ್ಯರು ಅರವಳಿಕೆ ಚುಚ್ಚುಮದ್ದು ನೀಡಿದರು. ಸ್ವಲ್ಪ ದೂರ ಓಡಿದ ಕಾಡಾನೆ ಪ್ರಜ್ಞೆತಪ್ಪಿ ಬಿದ್ದಿತು. ನಂತರ ನೀರು ಹಾಕಿ ಆರೈಕೆ ಮಾಡಿ ಹಗ್ಗ ಕಟ್ಟಿದರು. ಸಾಕಾನೆಗಳು ಕಾಡಾನೆಯನ್ನು ಸುಮಾರು 2 ಕಿ.ಮೀ. ಎಳೆದು ತಂದವು. ನಂತರ ಕ್ರೇನ್ ಮೂಲಕ ಲಾರಿಗೆ ಹತ್ತಿಸಿ ಸ್ಥಳಾಂತರ ಮಾಡಲಾಯಿತು. ಬೇಲೂರು ಭಾಗದ ಜನರಲ್ಲಿ ಆತಂಕ ಸೃಷ್ಟಿಸಿದ್ದ ಕಾಡಾನೆ ಸೆರೆಯಿಂದ ಜನರು ಕೊಂಚ ನಿಟ್ಟುಸಿರು ಬಿಟ್ಟರು.

ಏ.15 ರಂದು ಸೆರೆ ಹಿಡಿದಿದ್ದ ಕಾಡಾನೆ ಬೇಲೂರು ತಾಲ್ಲೂಕಿನ ಕೆರಗೋಡು ಗ್ರಾಮದಿಂದ ತಪ್ಪಿಸಿಕೊಂಡಿತ್ತು. ಶುಕ್ರವಾರ ಎರಡನೇ ದಿನ 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದರೂ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿತ್ತು.

ಬೇಲೂರು ತಾಲ್ಲೂಕಿನ ಕಾನನಹಳ್ಳಿ ಅರಣ್ಯದಲ್ಲಿ ಕಾಡಾನೆ ಇರುವ ಸ್ಥಳವನ್ನು ಪತ್ತೆ ಮಾಡಿತು. ಆದರೆ, ಒಂಟಿಕೋರೆ ಪುಂಡಾನೆ, ಕ್ಯಾಪ್ಟನ್ ಹೆಸರಿನ ಕಾಡಾನೆಯೊಂದಿಗೆ ನಿಂತಿದ್ದರಿಂದ ಅರಣ್ಯ ಇಲಾಖೆಗೆ ಹೊಸ ಸವಾಲು ಎದುರಾಗಿತ್ತು.

ನಂತರ ಸಾಕಾನೆಗಳಾದ ಭೀಮ, ಶ್ರೀಕಂಠ, ಹರ್ಷ, ಧನಂಜಯ, ಶ್ರೀರಾಮ ಹಾಗು ಅಯ್ಯಪ್ಪ ಕಾಡಾನೆ ಇರುವ ಸ್ಥಳಕ್ಕೆ ತೆರಳಿದವು. ನಂತರ ವೈದ್ಯರು ಪುಂಡಾನೆಗೆ ಅರವಳಿಕೆ ಚುಚ್ಚುಮದ್ದು ನೀಡಿದರು. ಕೂಡಲೇ ಒಂಟಿಕೋರೆ ಆನೆ ಹಾಗು ಕ್ಯಾಪ್ಟನ್ ಓಡಲು ಆರಂಭಿಸಿದ್ದು, ಅವುಗಳ ಬೆನ್ನಟ್ಟಿದ ಸಾಕಾನೆಗಳು ಹಾಗು ಇಟಿಎಫ್ ಸಿಬ್ಬಂದಿ ಎರಡು ಕಾಡಾನೆಗಳನ್ನು ಬೇರೆ ಬೇರೆ ಮಾಡಿದರು.

**40ಕ್ಕೂ ಹೆಚ್ಚು ಕಾಡಾನೆಗಳು**

ಈ ಭಾಗದಲ್ಲಿ 40ಕ್ಕೂ ಹೆಚ್ಚು ಕಾಡಾನೆಗಳಿವೆ. ಅವುಗಳಿಗೆ ಕುಡಿಯಲು ನೀರು, ತಿನ್ನಲು ಬೈನೆ, ಹಲಸು, ಮೆಕ್ಕೆಜೋಳ, ಭತ್ತ ಹೇರಳವಾಗಿ ಸಿಗುತ್ತಿದೆ. ಆದ್ದರಿಂದ ಕಾಡಾನೆಗಳು ಇಲ್ಲಿಂದ ಬೇರೆಡೆಗೆ ಹೋಗುತ್ತಿಲ್ಲ ಇದರ ಜೊತೆಗೆ ಪ್ರತಿ ವರ್ಷ ಕೂಡ ಸಂತತಿ ಕೂಡ ಹೆಚ್ಚಾಗುತ್ತಿದೆ.

ಶಾಲಾ-ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು, ಕಾಫಿ ತೋಟದ ಕೆಲಸಕ್ಕೆ ಕಾರ್ಮಿಕರು ಜೀವ ಭಯದಲ್ಲೇ ಬರಬೇಕಾಗಿದೆ. ಇದಲ್ಲದೇ 300 ಎಕರೆಗೂ ಹೆಚ್ಚು ಭತ್ತದ ಗದ್ದೆಗಳನ್ನು ರೈತರು ಪಾಳು ಬಿಟ್ಟಿದ್ದಾರೆ. ಕೇವಲ ಸಾವು, ನೋವಾದಾಗ ಮಾತ್ರ ಒಂದೆರಡು ಕಾಡಾನೆ ಸೆರೆ ಹಿಡಿದು ಸ್ಥಳಾಂತರ ಮಾಡುತ್ತಾರೆ. ಇದರ ಬದಲು ಎಲ್ಲಾ ಕಾಡಾನೆಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡುವ ಮೂಲಕ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯಬೇಕೆಂದು ಕಾಡಾನೆ ಪೀಡಿತ ಪ್ರದೇಶದ ಜನರು ಸರ್ಕಾರ ಹಾಗು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

**ಇಂದು ರೇಡಿಯೋ ಕಾಲರ್ ಅಳವಡಿಕೆ**

ಅರಣ್ಯ ಇಲಾಖೆ ತಂಡಕ್ಕೆ ಚಳ್ಳೆಹಣ್ಣು ಪರಾರಿಯಾಗಿದ್ದ ಒಂಟಿಕೋರೆ ಕಾಡಾನೆಯನ್ನು ಸೆರೆ ಹಿಡಿದು ಸ್ಥಳಾಂತರ ಮಾಡಲಾಗಿದೆ. ಭಾನುವಾರವೂ ಕಾರ್ಯಾಚರಣೆ ಮುಂದುವರೆಯಲಿದೆ. ಈಗಾಗಲೇ ಬೀಟಮ್ಮ ಗ್ಯಾಂಗ್‌ನ ಕಾಡಾನೆಯೊಂದಕ್ಕೆ ರೇಡಿಯೋ ಕಾಲರ್ ಅಳವಡಿಸಿದ್ದು ಅದರ ಬ್ಯಾಟರಿ ಖಾಲಿ ಆಗುತ್ತಿದೆ. ಆ ಕಾಡಾನೆಯನ್ನು ಸೆರೆ ಹಿಡಿದು ರೇಡಿಯೋ ಬದಲಾವಣೆ ಮಾಡಲಾಗುವುದು. ಅದರ ಜೊತೆಗೆ ಬೀಟಮ್ಮ-2 ಗುಂಪಿನ ಕಾಡಾನೆಯೊಂದಕ್ಕೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ನಡೆಯಲಿದೆ.



# ವರದಕ್ಷಿಣೆ ತರುವಂತೆ ಮಹಿಳೆ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಬೇಲೂರು:** ತವರು ಮನೆಯಿಂದ ವರದಕ್ಷಿಣೆ ತರುವಂತೆ ಒತ್ತಾಯಿಸಿ ಗಂಡ, ಮಾವ ಹಾಗು ಅತ್ತೆ ಸೊಸೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಚಿಕ್ಕಬ್ಯಾಡಗೆರೆ ಗ್ರಾಮದಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಕಡವಿನಹೊಸಹಳ್ಳಿ ಗ್ರಾಮದ ಕೆ.ಎಂ.ಚಂದ್ರಕಲಾ ಗಾಯ ಗೊಂಡಿದ್ದು ಹಿಮ್ಸ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಏಳು ವರ್ಷಗಳ ಹಿಂದೆ ಚಿಕ್ಕಬ್ಯಾಡಗೆರೆಯ ಪ್ರವೀಣ್ ಎಂಬಾತನ ಜೊತೆಗೆ ವಿವಾಹವಾಗಿದ್ದು ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದಾಂಪತ್ಯದಲ್ಲಿ ಬಿರುಕು ಉಂಟಾಗಿ ಆಗಾಗ ಗಲಾಟೆ ಮಾಡಿಕೊಳ್ಳುತ್ತಿದ್ದರು.ಗಂಡ ಪ್ರವೀಣ್, ಅತ್ತೆ ಪುಟ್ಟಮ್ಮ ಹಾಗು ಮಾವ ಶೇಷಯ್ಯ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ತವರು ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಇಲ್ಲದಿದ್ದರೆ ಬೇರೆ ಹುಡುಗಿಯನ್ನು ಮದುವೆಯಾಗುತ್ತೇನೆಂದು ಪ್ರವೀಣ್ ಬೆದರಿಕೆ ಹಾಕುತ್ತಿದ್ದ. ಏ.15ರಂದು ಮೂವರು ಸೇರಿ ಮನಬಂದಂತೆ ಹೊಡೆದು ನಂತರ ಮಾತ್ರೆಯನ್ನು ಬಲವಂತವಾಗಿ ಕುಡಿಸಿ ಕೊಲೆಗೆ ಯತ್ನಿಸಿದ್ದಾರೆ ಎನ್ನಲಾಗಿದೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಪಘಾತ : ಸಾವಿನ ಸಂಖ್ಯೆ 11ಕ್ಕೆ ಏರಿಕೆ

• ಪ್ರಜೋದಯ ವರದಿ

**ಹಾಸನ:** ಮಂತ್ರಾಲಯಕ್ಕೆ ತೆರಳುವ ಮಾರ್ಗಮಧ್ಯೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗಾಯ ಗೊಂಡಿದ್ದವರ ಪೈಕಿ ಮತ್ತಿಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಅದರೊಂದಿಗೆ ಸಾವಿನ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಬೇಲೂರು ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದವರಾದ ಜಯಮ್ಮ (65), ಶುಭ (35) ಮೃತ ಪಟ್ಟವರು. ಸಾವನ್ನಪ್ಪಿದ 11 ಜನರ ಪೈಕಿ ಬೇಲೂರಿನವರೇ 9 ಮಂದಿಯಾಗಿದ್ದಾರೆ. ಕಳೆದ ಬುಧವಾರ ಒಂದೇ ಕುಟುಂಬದವರು ಗೂಡ್ಸ್ ಆಟೋದಲ್ಲಿ ರಾಯರ ದರ್ಶನ ಪಡೆಯಲು ಮಂತ್ರಾಲಯಕ್ಕೆ ಹೋಗುತ್ತಿದ್ದರು. ಗುರುವಾರ ಮುಂಜಾನೆ ಆಟೋ ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ 8 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದರು. ಶುಕ್ರವಾರ 16 ವರ್ಷದ ತೇಜಸ್ವಿನಿ ಎಂಬ ಬಾಲಕಿ ಮೃತಪಟ್ಟಿದ್ದರು.

# ಬಸವೇಶ್ವರ ದೇಗುಲ ಲೋಕಾರ್ಪಣೆ

**ಅರಸೀಕೆರೆ:** ಜಾವಗಲ್ ಹೋಬಳಿ ಅರಕೆರೆ ಗ್ರಾಮದಲ್ಲಿ ಏ.19 ಹಾಗು 20ರಂದು ಶ್ರೀ ಬಸವೇಶ್ವರ ಸ್ವಾಮಿ ನೂತನ ದೇವಾಲಯ ಪ್ರವೇಶೋತ್ಸವ, ಶಿಲಾಮೂರ್ತಿ ಪ್ರತಿಷ್ಠಾಪನೆ, ಶಿಖರ ಕಳಸಾರೋಹಣ ಹಾಗು ದೇವಾಲಯ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಏ.20ರ ಸೋಮವಾರ ಬೆಳಿಗ್ಗೆ 10.30ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ ನೆರವೇರಲಿದ್ದು, ತಿಪಟೂರು ತಾಲ್ಲೂಕು ಕೆರಗೋಡಿ ರಂಗಾಪುರ ಮಠದ ಶ್ರೀ ಗುರುಪದೇಶಿ ಕೇಂದ್ರ ಸ್ವಾಮೀಜಿ, ಯಳನಾಡು ಮಠದ ಶ್ರೀ ಜ್ಞಾನಪ್ರಭು ಸಿದ್ದ ರಾಮ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಬೆಂಗಳೂರು ವಿಶೇಷ ಜಿಲ್ಲಾಧಿಕಾರಿ ಬಿ.ನಾಗರಾಜ್ ಉದ್ಘಾಟನೆ ನೆರವೇರಿಸುವರು. ಶಾಸಕ ಹೆಚ್.ಕೆ.ಸುರೇಶ್, ಮಾಜಿ ಸಚಿವ ಬಿ.ಶಿವರಾಮ್, ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಚಲನ ಚಿತ್ರ ನಟ ದೊಡ್ಡಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಉದ್ಯಮಿ ಗ್ರಾನೈಟ್ ರಾಜಶೇಖರ್ ಮತ್ತಿತರರು ಪಾಲ್ಗೊಳ್ಳುವರು.

# ಮಹಿಳಾ ಮೀಸಲಾತಿ ತಿರಸ್ಕಾರ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ



**ಹಾಸನ:** ಮಹಿಳಾ ಮೀಸಲಾತಿ ವಿಧೇಯಕ ಅನುಮೋದನೆಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟದ ನಡೆಯನ್ನು ಖಂಡಿಸಿ ಬಿಜೆಪಿ ಜಿಲ್ಲಾ ಘಟಕದಿಂದ ಶನಿವಾರ ಪ್ರತಿಭಟನೆ ನಡೆಯಿತು.

ಬಿಜೆಪಿ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ನಾರಾಯಣಗೌಡ ಅವರು ಮಾತನಾಡಿ, ದೇಶದ ಮಹಿಳೆಯರು ಬಹುಕಾಲದಿಂದ ನಿರೀಕ್ಷಿಸಿದ್ದ ಮಹಿಳಾ ಮೀಸಲಾತಿ ಜಾರಿಗೆ ತರುವ ಮಹತ್ವದ ಅಧಿನಿಯಮವನ್ನು ತಡೆಯುವ ಮೂಲಕ ಇಂಡಿಯಾ ಮೈತ್ರಿ ಕೂಟವು ಮಹಿಳಾ ಹಕ್ಕುಗಳಿಗೆ ಧಕ್ಕೆ ತಂದಿದೆ. ದೇಶದ ಒಟ್ಟು 144 ಕೋಟಿ ಜನಸಂಖ್ಯೆಯಲ್ಲಿ ಮಹಿಳೆಯರು ಶೇ.49ರಷ್ಟು ಇದ್ದರೂ ಲೋಕಸಭೆ, ವಿಧಾನಸಭೆ, ರಾಜ್ಯಸಭೆ ಹಾಗು ವಿಧಾನ ಪರಿಷತ್ತಿನಲ್ಲಿ ಕೇವಲ ಶೇ.14 ರಿಂದ 15 ರಷ್ಟು ಮಾತ್ರ ಪ್ರತಿನಿಧಿತ್ವ ಹೊಂದಿರುವುದು ಅನ್ಯಾಯಕರ ಸಂಗತಿ ಎಂದರು.

ಹಲವು ದಶಕಗಳಿಂದ ಮಹಿಳಾ ಮೀಸಲಾತಿಗಾಗಿ ನಡೆದ ಹೋರಾಟಗಳಿಗೆ ಈ ಅಧಿನಿಯಮ ಸ್ಪಂದನೆ ಆಗಬೇಕಾಗಿತ್ತು. ಕಾಂಗ್ರೆಸ್ ಪಕ್ಷವು ರಾಜಕೀಯಕ್ಕಾಗಿ ವಿರೋಧ ಮಾಡುವ ಮೂಲಕ ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡಿದೆ. ಇಂತಹ ನಡೆಗಳನ್ನು ರಾಷ್ಟ್ರದ ಜನರು ಕಾಂಗ್ರೆಸ್‌ಗೆ ತಕ್ಕ ಉತ್ತರ ನೀಡಬೇಕು. ಬಿಜೆಪಿ ಈ ವಿಷಯದ ಬಗ್ಗೆ ರಾಜ್ಯದಲ್ಲಿ ಹೋರಾಟ ಮುಂದುವರಿಸಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವವರೆಗೆ ನಿರಂತರ ಹೋರಾಟ ನಡೆಸಲಿದೆಂದು ತಿಳಿಸಿದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್ ಅವರು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಮಹಿಳಾ ಸಬಲೀಕರಣಕ್ಕೆ ಮಹತ್ವ ನೀಡಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿದ್ದಾರೆ. ರಾಷ್ಟ್ರಪತಿ ಹುದ್ದೆಗೆ ದ್ರೌಪದಿ ಮುರ್ಮು ಅವರನ್ನು ಆಯ್ಕೆ ಮಾಡಿರುವುದು ಹಾಗೂ ರಕ್ಷಣಾ, ಹಣಕಾಸು ಸೇರಿ ಪ್ರಮುಖ ಖಾತೆಗಳಲ್ಲಿ ಮಹಿಳೆಯರನ್ನು ನೇಮಿಸಿರುವುದು ಇದಕ್ಕೆ ಸಾಕ್ಷಿ ಎಂದರು.

ರಾಜ್ಯ ಮಹಿಳಾ ಮೋರ್ಚಾ ಸದಸ್ಯೆ ವಿಜಯಲಕ್ಷ್ಮಿ ಅಂಜನಪ್ಪ, ಜಿಲ್ಲಾ ಉಪಾಧ್ಯಕ್ಷ ರಮೇಶ್, ಓಬಿಸಿ ಮೋರ್ಚಾ ಮುಖಂಡ ಜಯಣ್ಣ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.



# ಮಹಿಳಾ ಮೀಸಲು: ವಾಗ್ದಾನದಿಂದ ಇತಿಹಾಸದತ್ತ

ವೀಕೆಂಡ್ ವಿತ್ ಮೋಹನ್

ಬೇಟಿ ಬಚಾವೋ ಬೇಟಿ ಪಡಾವೋ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದೆ. ಉಜ್ವಲ ಯೋಜನೆ ಮೂಲಕ 10 ಕೋಟಿಗೂ ಅಧಿಕ ಮನೆಗಳಿಗೆ ಅಡುಗೆ ಅನಿಲ ಸಂಪರ್ಕದಿಂದ ಹೆಣ್ಣು ಮಕ್ಕಳ ಆರೋಗ್ಯ ಮತ್ತು ಜೀವನ ಪದ್ಧತಿಯಲ್ಲಿ ಮಹತ್ವದ ಬದಲಾವಣೆ ತಂದಿದೆ.

ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹಿಳೆಯರ ಸಮಾನ ಪ್ರತಿನಿಧಿತ್ವ ಎಂಬುದು ಹಲವು ದಶಕಗಳ ಕನಸಾಗಿತ್ತು. ಈ ಕನಸಿಗೆ ವಾಸ್ತವ ರೂಪ ನೀಡಿದ ಮಹತ್ವದ ಹೆಜ್ಜೆ ನಾರಿ ಶಕ್ತಿ ವಂದನ ಅಧಿನಿಯಮ, 2023. ಸುಮಾರು 27 ವರ್ಷಗಳ ಕಾಲ ರಾಜಕೀಯ ಚರ್ಚೆ, ವಿಳಂಬ ಮತ್ತು ವೈಫಲ್ಯಗಳ ನಡುವೆ ಸಿಲುಕಿದ್ದ ಮಹಿಳಾ ಮೀಸಲಾತಿ ಪ್ರಶ್ನೆಗೆ ಕೊನೆಗೂ ಪರಿಹಾರ ದೊರೆತಿದೆ. ಅನೇಕ ಸರಕಾರಗಳು ಬಂದು ಹೋಗಿದ್ದರೂ, ಈ ಮಹತ್ವದ ಮಸೂದೆ ಕಾನೂನಾಗಿ ರೂಪುಗೊಳ್ಳಲಿಲ್ಲ.

ಆದರೆ, 2023ರಲ್ಲಿ ಅದು ಸಾಧ್ಯವಾಯಿತು. ಇದು ಕೇವಲ ಒಂದು ಕಾನೂನು ಬದಲಾವಣೆ ಮಾತ್ರವಲ್ಲ, ಭಾರತೀಯ ಪ್ರಜಾಪ್ರಭುತ್ವದ ದಿಕ್ಕನ್ನು ಬದಲಿಸುವ ಐತಿಹಾಸಿಕ ತಿರುವಾಗಿದೆ. ಈ ಅಧಿ ನಿಯಮದ ಮೂಲಕ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಖಚಿತಪಡಿಸಲಾಗಿದೆ. ಇದರಲ್ಲೂ ಎಸ್‌ಸಿ ಮತ್ತು ಎಸ್‌ಟಿ ವರ್ಗಗಳಿಗೆ ಮೀಸಲಾದ ಸ್ಥಾನಗಳಲ್ಲಿ ಕೂಡ ಮಹಿಳೆಯರಿಗೆ ಮೀಸಲಾಗುತ್ತದೆ. ಇದರಿಂದ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಹೆಚ್ಚುವುದಷ್ಟೇ ಅಲ್ಲದೇ, ಸಾಮಾಜಿಕ ನ್ಯಾಯಕ್ಕೂ ಬಲ ಸಿಗುತ್ತದೆ.

ಭಾರತದಲ್ಲಿ ಮಹಿಳೆಯರು ದೇಶದ ಜನಸಂಖ್ಯೆಯ ಅರ್ಧ ಭಾಗವಾಗಿದ್ದರೂ, ಅವರ ರಾಜಕೀಯ ಪ್ರತಿನಿಧಿತ್ವ ಕಡಿಮೆ ಇರುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು, ಈ ಕಾಯ್ದೆ ಆ ಕೊರತೆಯನ್ನು ನೀಗಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಮಹಿಳಾ ಮೀಸಲಾತಿ ಮಸೂದೆ ಮೊದಲ ಬಾರಿಗೆ 1996ರಲ್ಲಿ ಪರಿಚಯಿಸಲಾಯಿತು, ನಂತರ ಹಲವು ಬಾರಿ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಯಿತಾದರೂ, ಅದು ಕಾನೂನಾಗಲಿಲ್ಲ.

ಈ ವಿಳಂಬಕ್ಕೆ ಮುಖ್ಯ ಕಾರಣಗಳು ರಾಜಕೀಯ ಇಚ್ಛಾಶಕ್ತಿ ಕೊರತೆ, ಪಕ್ಷಗಳ ಒಳಗಿನ ಭಿನ್ನಾಭಿಪ್ರಾಯಗಳು, ಮತಗಟ್ಟೆ ರಾಜಕೀಯದ ಲೆಕ್ಕಾಚಾರ ಮತ್ತು ಸಮನ್ವಯದ ಕೊರತೆಯಾಗಿತ್ತು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಈ ವಿಷಯವನ್ನು ರಾಷ್ಟ್ರದ ಅಗತ್ಯವೆಂದು ಪರಿಗಣಿಸುವುದಕ್ಕಿಂತ, ರಾಜಕೀಯವಾಗಿ ಅಸೌಕರ್ಯಕರ ವಿಷಯವೆಂದು ನೋಡಿದವು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಈ ಪರಿಸ್ಥಿತಿಯನ್ನು ಬದಲಿಸಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರಕಾರ. 2023ರ ಸೆಪ್ಟೆಂಬರ್‌ನಲ್ಲಿ ಹೊಸ ಸಂಸತ್ ಭವನದಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸುವ ಮೂಲಕ ಸರಕಾರ ತನ್ನ ಸ್ಪಷ್ಟ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿತು. ಹೊಸ ಸಂಸತ್ ಭವನದಲ್ಲಿ ಮೊದಲ ಪ್ರಮುಖ ಕಾನೂನಾಗಿ ಈ ಮಸೂದೆಯನ್ನು ಪರಿಚಯಿಸುವ ಮೂಲಕ ಮಹಿಳಾ ಸಬಲೀಕರಣವನ್ನು ಆಡಳಿತದ ಕೇಂದ್ರ ಬಿಂದುವಾಗಿ ರೂಪಿಸಿತು.

ಇದು ಕೇವಲ ಪ್ರತಿಕಾತ್ಮಕ ಹೆಜ್ಜೆಯಲ್ಲ, ಬಲವಾದ ರಾಜಕೀಯ ಸಂದೇಶವೂ ಆಗಿತ್ತು. ಮೋದಿ ಸರಕಾರ ಈ ಮಸೂದೆಯನ್ನು ಕೇವಲ ಮೀಸಲಾತಿ ನೀತಿಯಾಗಿ ನೋಡದೆ, ನಾರಿ ಶಕ್ತಿ ಎಂಬ ವಿಶಾಲ ದೃಷ್ಟಿಕೋನದ ಭಾಗವಾಗಿ ಮಂಡಿಸಿದೆ. ಮಹಿಳೆಯರ ಅಭಿವೃದ್ಧಿಯನ್ನು ಕೇಂದ್ರವಾಗಿಟ್ಟುಕೊಂಡು, ಕಳೆದ ಹನ್ನೆರಡು ವರ್ಷಗಳಲ್ಲಿ ಹಲವು ಯೋಜನೆಗಳನ್ನು ಮೋದಿ ನೇತೃತ್ವದ ಸರಕಾರ ಜಾರಿಗೊಳಿಸಲಾಗಿದೆ.


ಬೇಟಿ ಬಚಾವೋ ಬೇಟಿ ಪಡಾವೋ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದೆ. ಉಜ್ವಲ ಯೋಜನೆ ಮೂಲಕ 10 ಕೋಟಿಗೂ ಅಧಿಕ ಮನೆಗಳಿಗೆ ಅಡುಗೆ ಅನಿಲ ಸಂಪರ್ಕ ನೀಡುವ ಮೂಲಕ ಹೆಣ್ಣುಮಕ್ಕಳ ಆರೋಗ್ಯ ಮತ್ತು ಜೀವನ ಪದ್ಧತಿಯಲ್ಲಿ ಮಹತ್ವದ ಬದಲಾವಣೆಯನ್ನು ತಂದಿದೆ, ಸುಕನ್ಯಾ ಸಮೃದ್ಧಿ ಯೋಜನೆ ಮೂಲಕ ಹೆಣ್ಣುಮಕ್ಕಳ ಭವಿಷ್ಯದ ಖರ್ಚಿಗೆ ಅನುಕೂಲ ಮಾಡಿಕೊಟ್ಟಿದೆ, ತ್ರಿವಳಿ ತಲಾಕ್ ರದ್ದು ಮಾಡುವ ಮೂಲಕ ಮುಸ್ಲಿಂ ಧರ್ಮದ ಹೆಣ್ಣುಮಕ್ಕಳ ಜೀವನವನ್ನು ರಕ್ಷಿಸುವ ಕೆಲಸ ಮಾಡಿದೆ.

ಕಾರ್ಪೊರೇಟ್ ಜಗತ್ತಿನಲ್ಲಿ ಹೆಣ್ಣುಮಕ್ಕಳು ಸಂಸ್ಥೆಯ ನಿರ್ದೇಶಕರಾಗಿದ್ದರೆ ಆ ಸಂಸ್ಥೆಗೆ ಸರಕಾರದಿಂದ ಅನೇಕ ರೀತಿಯ ಸವಲತ್ತುಗಳನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿದೆ, ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ನರೇಂದ್ರ ಮೋದಿ ನೇತೃತ್ವದ ಸರಕಾರ ಸ್ವಚ್ಛ ಭಾರತ್ ಅಭಿಯಾನ ದಡಿಯಲ್ಲಿ ದೇಶದಾದ್ಯಂತ 10 ಕೋಟಿಗೂ ಅಧಿಕ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಬಯಲು ಮುಕ್ತ ಶೌಚ ಮಾಡಿದೆ.

ದೇಶದಾದ್ಯಂತ 55 ಕೋಟಿಗೂ ಅಧಿಕ ಜನರಿಗೆ ಜನ್ ಧನ್ ಯೋಜನೆ ಮೂಲಕ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸಲಾಗಿದೆ. ಇವೆಲ್ಲವೂ ಸಹ ದೇಶದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಬಲ ನೀಡಿವೆ, ಇವುಗಳ ಜತೆಗೆ



**ಭಾರತದಲ್ಲಿ ಮಹಿಳೆಯರು ದೇಶದ ಜನಸಂಖ್ಯೆಯ ಅರ್ಧ ಭಾಗವಾಗಿದ್ದರೂ, ಅವರ ರಾಜಕೀಯ ಪ್ರತಿನಿಧಿತ್ವ ಕಡಿಮೆ ಇರುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು, ಈ ಕಾಯ್ದೆ ಆ ಕೊರತೆಯನ್ನು ನೀಗಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಮಹಿಳಾ ಮೀಸಲಾತಿ ಮಸೂದೆ ಮೊದಲ ಬಾರಿಗೆ 1996ರಲ್ಲಿ ಪರಿಚಯಿಸಲಾಯಿತು, ನಂತರ ಹಲವು ಬಾರಿ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಯಿತಾದರೂ, ಅದು ಕಾನೂನಾಗಲಿಲ್ಲ.**



ಮಹಿಳೆಯರ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ತೆಗೆದುಕೊಂಡ ದಿಟ್ಟ ನಿರ್ಧಾರ ನಾರಿ ಶಕ್ತಿ ವಂಧನಾ ಅಧಿನಿಯಮ, 2023.

ಈ ಹಿನ್ನೆಲೆಯಲ್ಲಿ ಮಹಿಳೆಯರ ರಾಜಕೀಯ ಸಬಲೀಕರಣ, ನರೇಂದ್ರ ಮೋದಿಯವರ ಮುಂದುವರಿದ ಹೆಜ್ಜೆಯಾಗಿದೆ. ಮುಖ್ಯವಾಗಿ, ಈ ಮಸೂದೆಯನ್ನು ಕೇವಲ ಪ್ರಸ್ತಾಪವಾಗಿ ಬಿಡದೆ, ಕಾಯ್ದೆಯಾಗಿ ರೂಪಿಸಲಾಗಿದೆ. ರಾಜಕೀಯ ಚರ್ಚೆಯಿಂದ ಸಂವಿಧಾನಿಕ ಭದ್ರತೆಗೆ ಈ ಬದಲಾವಣೆ ಬಹುಮುಖ್ಯ ವಾಗಿದ್ದು, ಇದು ಮಹಿಳೆಯರ ರಾಜಕೀಯ ಹಕ್ಕುಗಳನ್ನು ಸ್ಥಿರಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ನಮ್ಮ ದೇಶದ ವಿಪರ್ಯಾಸವೆಂದರೆ ಇಂದಿರಾಗಾಂಧಿ ಮಹಿಳಾ ಪ್ರಧಾನಮಂತ್ರಿಯಾದರೂ ಸಹ ತಮ್ಮ ಅವಧಿಯಲ್ಲಿ ಈ ಮಸೂದೆಯನ್ನು ಜಾರಿಗೆ ತರುವ ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ. ಕಾಂಗ್ರೆಸ್ಸಿನ ನಾಯಕಿ ಸೋನಿಯಾ ಗಾಂಧಿ ಹಿಡಿತದಲ್ಲಿ ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರ ಕೂಡ ಈ ಮಸೂದೆಯನ್ನು ಜಾರಿಗೆ ತರುವಲ್ಲಿ ವಿಫಲವಾಯಿತು.

ಕಾಂಗ್ರೆಸ್ಸಿನ ಮತಬ್ಯಾಂಕ್ ಓಲೈಕೆ ರಾಜಕಾರಣ ಯಾವ ಮಟ್ಟಕ್ಕಿತ್ತೆಂದರೆ, ಮುಸ್ಲಿಂ ಮಹಿಳೆಯರ ಹಕ್ಕುಗಳ ವಿಷಯದಲ್ಲಿ ಶಾ ಬಾನು ಪ್ರಕರಣದಲ್ಲಿ ನ್ಯಾಯಾಲಯ ಮಹಿಳೆಯರ ಪರವಾಗಿ ನೀಡಿದ ತೀರ್ಪನ್ನು ಶೂನ್ಯಗೊಳಿಸುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿಯನ್ನು ತಂದು ಅವರ ಹಕ್ಕುಗಳನ್ನು ಕಿತ್ತುಕೊಳ್ಳುವ ಕೆಲಸ ಮಾಡಿದ್ದು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರ.

ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವುದನ್ನು ಸದಾ ವಿರೋಧಿಸಿಕೊಂಡು ಬಂದಿರುವುದು ಕಾಂಗ್ರೆಸ್ಸಿನ ದಶಕಗಳ ಚಾಳಿ, ಆ ಪಕ್ಷದ ಪಾಲಿಗೆ ಹೆಣ್ಣುಮಕ್ಕಳ ರಾಜಕೀಯ ಮೀಸಲು ಕೇವಲ ನೆಹರು ಕುಟುಂಬಕ್ಕೆ ಮಾತ್ರ ಮೀಸಲಾಗಿದೆ.

ಕುಟುಂಬ ನಿರ್ವಹಣೆಯಲ್ಲಿ ಹೆಣ್ಣಿನ ಪಾತ್ರ ಬಹಳ ದೊಡ್ಡದು, ಕಷ್ಟ ಬಂದಾಗ ಕುಟುಂಬವನ್ನು ಸಂಬಾಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವವರು ಮಹಿಳೆಯರು. ಅದೇ ರೀತಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಇಡೀ ಜಗತ್ತಿನ ಆರ್ಥಿಕತೆ ಸ್ತಬ್ದವಾಗಿತ್ತು, ಭಾರತದ ಆರ್ಥಿಕತೆ ಸುಮಾರು ಎರಡು ವರ್ಷಗಳ ಕಾಲ ಸ್ತಬ್ದವಾಗಿತ್ತು. ಅಂತಹ ಸಂದಿಗ್ಧ ಸಂದರ್ಭದಲ್ಲಿ ಭಾರತದ ಆರ್ಥಿಕತೆಯನ್ನು ಮುಂದುವರೆಸಿದ ಕೀರ್ತಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಲ್ಲಬೇಕು.

ಸಂಕಷ್ಟದ ಸಂದರ್ಭದಲ್ಲಿ ಹೆಣ್ಣು ಕುಟುಂಬ ನಿರ್ವಹಿಸಿದ ರೀತಿಯಲ್ಲಿ ನಿರ್ಮಲಾ ಅವರು ದೇಶದ ಆರ್ಥಿಕತೆಯನ್ನು ನಿರ್ವಹಿಸಿದ್ದರು, ಆರ್ಥಿಕತೆ ಸ್ತಬ್ದವಾದ ಪರಿಣಾಮ ಸರಕಾರಕ್ಕೆ ತೆರಿಗೆ ಹಣ ಬರುತ್ತಿರಲಿಲ್ಲ, ಮತ್ತೊಂದೆಡೆ ಜನರ ಆರೋಗ್ಯವನ್ನು ಕಾಪಾಡುವ ಮಹತ್ತರವಾದ ಜವಾಬ್ದಾರಿ, ಎರಡನ್ನೂ ಒಬ್ಬ ಮಹಿಳೆಯಾಗಿ ಅವರು ನಿರ್ವಹಿಸಿದ ರೀತಿಯನ್ನು ಇಡೀ ಜಗತ್ತು ನೋಡಿದೆ.

ಭಾರತವನ್ನು ತಾಯಿಗೆ ಹೋಲಿಸಿ ಭಾರತಮಾತೆಯಾಗಿ ಸಾವಿರಾರು ವರ್ಷಗಳಿಂದ ಪೂಜಿಸುತ್ತಾ ಬಂದಿದ್ದೇವೆ, ಇಂತಹ ನೆಲದಲ್ಲಿ ಅನೇಕ ಬಾರಿ ಸಂಕಷ್ಟದ ಸಮಯದಲ್ಲಿ ನಾರಿಯ ಶಕ್ತಿ ಪ್ರದರ್ಶನವಾಗಿದೆ. ಇಂತಹ ದೇಶದಲ್ಲಿ ಮಹಿಳೆಯ ರಾಜಕೀಯ ಪ್ರತಿನಿಧಿತ್ವಕ್ಕಾಗಿ ಏಳು ದಶಕಗಳ ಸಮಯ ಈಗಾಗಲೇ ವ್ಯರ್ಥವಾಗಿದೆ.


ದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದರೂ ಸಹ, ಪುರುಷ ಪ್ರಧಾನ ಸಮಾಜದಲ್ಲಿ ಇಚ್ಛಾಶಕ್ತಿ ಕೊರತೆಯಿಂದ ಈ ಮೀಸಲಾತಿ ವಿಳಂಬವಾಗಿತ್ತು. ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ನರೇಂದ್ರ ಮೋದಿಯವರ ನಾರಿ ಶಕ್ತಿ ವಂದನಾ ಅಧಿನಿಯಮ ಜಾರಿಗೆ ಬರುವ ಮೂಲಕ ಏಳು ದಶಕಗಳ ಕನಸು ನನಸಾಗುತ್ತಿದೆ.

ಒಟ್ಟಿನಲ್ಲಿ, ನಾರಿ ಶಕ್ತಿ ವಂದನ ಅಧಿನಿಯಮ ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಮಹತ್ವದ ತಿರುವಾಗಿದೆ. ಹಲವು ವರ್ಷಗಳಿಂದ ವಿಳಂಬವಾಗಿದ್ದ ಸುಧಾರಣೆಯನ್ನು ಕಾನೂನಾಗಿ ರೂಪಿಸುವತ್ತ ದಿಟ್ಟಹೆಜ್ಜೆ ಇಟ್ಟಿರುವ ಮೋದಿ ಸರಕಾರ ನಿರ್ಣಾಯಕ ಪಾತ್ರ ವಹಿಸಿದೆ.

ರಾಜಕೀಯ ಇಚ್ಛಾಶಕ್ತಿ, ಸಮನ್ವಯ ಮತ್ತು ದೀರ್ಘಕಾಲೀನ ದೃಷ್ಟಿಕೋನದ ಮೂಲಕ ಈ ಸಾಧನೆ ಸಾಧ್ಯವಾಗಿದೆ. ಇದು ಕೇವಲ ಮಹಿಳೆಯರಿಗೆ ಸ್ಥಾನ ಮೀಸಲಿಡುವ ಕಾನೂನು ಮಾತ್ರವಲ್ಲ, ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಮಹಿಳೆಯರಿಗೆ ನಾಯಕತ್ವ ನೀಡುವ ಮಹತ್ವದ ಹೆಜ್ಜೆಯಾಗಿದೆ.

**- ಮೋಹನ್** ವಿಶ್ವ

# ಅಜ್ಜಿ ಊರಲ್ಲಿ ಬೇಸಿಗೆಯ ರಜೆಯ ಮಜ



ಆಯ್ತು ಹೋಗಪ್ಪ,

ಅಪ್ಪ, ಅರೆ ಮನಸ್ಸಿನಿಂದ, ಅರೆ ಸಿಟ್ಟಿನಿಂದ, ಹೇಳಿದ್ದೇ ತಡ, ಒಂದು ಬಟ್ಟೆ ಚೀಲದಲ್ಲಿ ಕೈಗೆ ಸಿಕ್ಕಷ್ಟು ಬನೀನು, ಚಡ್ಡಿ, ಶರ್ಟು, ನಿಕ್ಕರ್‌ಗಳನ್ನು ಇಟ್ಟುಕೊಂಡು, ಸಪ್ಪೆ ಮೋರೆ ಹಾಕಿಕೊಂಡು ಬಸ್ ಸ್ಟ್ಯಾಂಡಿನ ಕಡೆ ಹೋಗುತ್ತಿದ್ದ ಅಜ್ಜಿ (ಅಮ್ಮನ ಅಮ್ಮ) ಬಳಿ ಓಡಿ ಹೋಗಿ, ಜೊತೆ ಸೇರಿದಾಗ ಅಜ್ಜಿಯ ಮುಖದಲ್ಲೂ ಸಂತೋಷ, ಸಂಭ್ರಮ.

ಇದು ಅರವತ್ತರ ದಶಕ. ಆಗ ನಾವು ಚಿತ್ರದುರ್ಗದಲ್ಲಿ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳು. ಬೇಸಿಗೆ ರಜ ಪ್ರಾರಂಭವಾದ ತಕ್ಷಣ, ನಮ್ಮ ಅಜ್ಜಿ ನಮ್ಮನ್ನು ಊರಿಗೆ ಕರೆದುಕೊಂಡು ಹೋಗಲು ಬರುತ್ತಿದ್ದರು. ಆದರೆ ಇನ್ನೂ ನಮ್ಮ ಅಣ್ಣಂದಿರಿಗೆ ಪರೀಕ್ಷೆಗಳು ನಡೆಯುತ್ತಿದ್ದು, ಅವರಿಗೆ ರಜೆ ಬಿಟ್ಟ ನಂತರ ಕಳುಹಿಸುವುದಾಗಿ ಖಡಾ ಖಂಡಿತವಾಗಿ ಅಪ್ಪ ಹೇಳಿದಾಗ, ಅಜ್ಜಿ ಸಪ್ಪೆ ಮೋರೆ ಹಾಕಿಕೊಂಡು ವಾಪಾಸ್ ಹೋಗುತ್ತಿದ್ದರು. ಆದರೆ ನಮ್ಮ ಹಠ ಮತ್ತು ಅಳು ಮೋರೆ ನೋಡಿ ಅರ್ಧ ಸಿಟ್ಟಿನಿಂದ, ಅರ್ಧ ಬೇಜಾರಿನಿಂದ, ಅಪ್ಪ ಅನುಮತಿ ನೀಡುತ್ತಿದ್ದರು. ಹುಡುಗರು ಇಲ್ಲೇ ಇದ್ದು ರಜೆಯಲ್ಲಿ ಮಗ್ಗಿ, ಇಂಗ್ಲಿಷ್ ಗ್ರಾಮರ್, ಜನರಲ್ ನಾಲೆಡ್ಜ್‌ಗಳನ್ನು ಕಲಿಯಲಿ, ಆ ಹಳ್ಳಿಗೆ ಹೋಗಿ ಸುಮ್ಮನೆ ತಿರುಗಿ ತಿರುಗಿ ಹಾಳಾಗುತ್ತಾರೆ, ಎನ್ನುವುದು ಅವರ ಅನಿಸಿಕೆ.

ನಾವು ಅಜ್ಜಿಯ ಜೊತೆ ಜ್ಯೋತಿ ಬಸ್‌ನಲ್ಲಿ ಅವರ ಊರಿಗೆ ಹೋಗುತ್ತಿದ್ದೆವು. ನಮ್ಮ ಅಜ್ಜಿಯ ಊರಿನವರೆಗೂ ಯಾವ ಬಸ್ಸುಗಳೂ ಇರುತ್ತಿರಲಿಲ್ಲ. ಸಂಜೆ 5:30 ಕ್ಕೆ ಚಿತ್ರದುರ್ಗದಿಂದ ಹೊರಟರೆ ನಮ್ಮ ಅಜ್ಜಿಯ ಊರಿನಿಂದ ಎರಡು ಕಿಲೋಮೀಟರ್ ದೂರದಲ್ಲಿದ್ದ ಮುಷ್ಟಲಗುಮ್ಮಿಗೆ ಹೋಗುತ್ತಿತ್ತು. ಅಷ್ಟರಲ್ಲಿ ರಾತ್ರಿ 8:30 ಆಗಿ ಕತ್ತಲಲ್ಲಿ ಹೋಗಲು ಯಾರೂ ಜೊತೆ ಇಲ್ಲದಿದ್ದರೆ ಅಲ್ಲೇ ಸಾಹುಕಾರರ ಮನೆಯ ಒಳ ಜಗಲಿಯ ಮೇಲೆ ಮಲಗಿ, ಬೆಳಗ್ಗೆ ಎದ್ದು ನಡೆದು ಹೋಗುತ್ತಿದ್ದೆವು. ಮಧ್ಯದಲ್ಲಿ ಚಿನ್ನಹಗರಿ ಹಳ್ಳ. ಅದರಲ್ಲಿ ಕೈ ಕಾಲು ಮುಖ ತೊಳೆದು ಒರೆಸಿಕೊಳ್ಳಲು ಟವಲ್ ಇಲ್ಲದೆ ಹಾಗೇ ಹೋಗ್ತಾ ಹೋಗ್ತಾ ಒಣಗಿಸಿ ಕೊಳ್ಳುತ್ತಿದ್ದೆವು.

ಊರು ಮುಟ್ಟಿದ ನಂತರ ನಮ್ಮ ದಿನಚರಿಯೆಲ್ಲಾ ನಮ್ಮ ದೊಡ್ಡಮ್ಮನವರ ಜೊತೆ. ಬೆಳಗ್ಗೆ ಎದ್ದ ತಕ್ಷಣ ಹಸುಗಳನ್ನು ಊರ ಮುಂದಿನ ಮಂದೆಗೆ ಹೊಡೆದುಕೊಂಡು ಹೋಗಬೇಕು. ಹಸುಗಳು ಅಭ್ಯಾಸ ಬಲದಿಂದ ತಮ್ಮಷ್ಟಕ್ಕೆ ತಾವೇ ಹೋದರೂ, ನಾವು ಒಂದು ಜೋಳದ ದಂಟು ಕೈಯಲ್ಲಿ ಹಿಡಿದು ಹೊಯ್ ಹೋಯ್‌ಎನ್ನುತ್ತಾ ಹೊಡೆದುಕೊಂಡು ಹೋಗಿ, ನಮ್ಮ ಹಸುಗಳು ಊರ ಮುಂದಿನ ಊರ ದನಗಳ ಗುಂಪಿಗೆ ಸೇರಿಸಿದ ಮೇಲೆ, ಅವುಗಳನ್ನು ಎಲ್ಲಾ ಹಸುಗಳ ಜೊತೆ ಹೊಡೆದುಕೊಂಡು ಹೋಗುತ್ತಾರೋ ಇಲ್ಲವೋ ಅಂತ ಅನುಮಾನವಾಗಿ, ಅಲ್ಲೇ ಕಟ್ಟೆಯ ಮೇಲೆ ಕೂಡುತ್ತಿದ್ದೆವು. ಊರಿನಲ್ಲಿರುವ ಎಲ್ಲಾ ಹಸುಗಳು ಬಂದ ಮೇಲೆ ದನ ಕಾಯುವವರು ಅವುಗಳನ್ನೆಲ್ಲ ಮೇಯಿಸಲು, ಹೊಡೆದುಕೊಂಡು ಹೋಗುವವರೆಗೂ ಕುಳಿತು, ನಂತರ ಹಿಂದಿರುಗಿ ಬರುತ್ತಿದ್ದೆವು. ನಂತರ ಎಮ್ಮೆಗಳ ಸರದಿ.

ಅವೆರಡನ್ನು ಕಳುಹಿಸಿದ ನಂತರ (ಮಕ್ಕಳನ್ನು ಶಾಲೆಗೆ ಕಳುಹಿಸಿದ ಹಾಗೆ), ನಾವು ಸ್ನಾನ ಮಾಡಿ, ಪಕ್ಕದಲ್ಲೇ ಇದ್ದ ಈಶ್ವರನ ಗುಡಿಗೆ ಹೋಗಬೇಕು. ಬರೀ ಕೈಯಲ್ಲಿ ಹೋಗುವ ಹಾಗಿಲ್ಲ. ಸಣ್ಣ ಬೆಲ್ಲದ ಚೂರನ್ನು ಹಿಡಿದು ದೇವಸ್ಥಾನಕ್ಕೆ ಹೋಗಿ, ಎಗರಿ ಎಗರಿ ಗಂಟೆ ಹೊಡೆದು, ಕೈಮುಗಿದು, ಸಾಷ್ಟಾಂಗ ನಮಸ್ಕಾರ ಮಾಡಿ, ತೆಗೆದುಕೊಂಡು ಹೋದ ಬೆಲ್ಲದ ಚೂರನ್ನು ಎರಡು ಭಾಗ ಮಾಡಿ ಒಂದು ಭಾಗ ಈಶ್ವರನಿಗೆ, ಇನ್ನೊಂದು ಭಾಗ ಎದುರಿಗೆ ಕುಳಿತಿದ್ದ ಬಸವಣ್ಣನಿಗೆ, ಹಂಚಿ ಕೈಮುಗಿದು, ಅಡ್ಡ ಬಿದ್ದು ಹೊರ ಬರುವ ವೇಳೆಗೆ, ಅದೇ ಊರಿನ ಮೂಕ ಜಯವ್ವ ( ನಮ್ಮದೇ ವಯಸ್ಸಿನ ಮಾತನಾಡಲು ಬಾರದ ಮೂಕ ಹುಡುಗಿ) ಬಂದು, ದೇವರಿಗೆ ಕೈ ಮುಗಿದು ನಾವು ಇಟ್ಟ ಬೆಲ್ಲವನ್ನು ತಿಂದುಬಿಡುತ್ತಿದ್ದಳು. ನಾವು ಯಾಕೆ ತಿಂದೆ ಅಂತ ಜಗಳ ಮಾಡಿದಾಗ, ಮಾತನಾಡಲು ಬಾರದಿದ್ದರೂ ಕೈ ಬಾಯಿ ಸನ್ನೆ ಮಾಡಿ, ಅದು ದೇವರು ಕೊಟ್ಟ ಪ್ರಸಾದ, ಅದಕ್ಕೆ ತಿಂದೆ ಎನ್ನುತ್ತಿದ್ದಳು.

ನಂತರ ಮನೆಗೆ ಬಂದು ಬೆಳಗಿನ ಉಪಹಾರ ಆಗುವವರೆಗೂ ಕಾಯುತ್ತಾ ಕಟ್ಟೆ ಮೇಲೆ ಕೂತಿರುವಾಗ ಕಂತೇ ಭಿಕ್ಷ ಎಂದು ಪಕ್ಕದ ಈಶ್ವರ ಗುಡಿಯಲ್ಲಿ ಪೂಜೆ ಮಾಡುವ ಅಯ್ಯನವರು ಬಂದಾಗ, ಅವರಿಗೆ ಭಿಕ್ಷೆ ಕೊಡಲು ಪೈಪೋಟಿಯ ಮೇಲೆ, ದೊಡ್ಡಮ್ಮ ಕೊಟ್ಟ ಏನಾದರೂ ತಿನಿಸನ್ನು ಕೊಟ್ಟು ಅವರ ಕಾಲಿಗೆ ಅಡ್ಡ ಬಿದ್ದು ಆಶೀರ್ವಾದ ಪಡೆದುಕೊಳ್ಳುತ್ತಿದ್ದೆವು. ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬ ಅಯ್ಯನವರು, ಕೋರಾಣ್ಯದಲಿ ಭಿಕ್ಷೆ ಅಂತ ಬರುತ್ತಿದ್ದರು ಅವರಿಗೆ ಯಾವುದಾದರೂ ಧಾನ್ಯವನ್ನು ಕೊಡಬೇಕಾಗಿತ್ತು, ಅದಕ್ಕೂ ಮತ್ತೆ ಪೈಪೋಟಿ. ಅಷ್ಟೊತ್ತಿಗೆ ಬೆಳಗಿನ ಉಪಾಹಾರ ತಿನ್ನಲು ಕಟ್ಟೆಯ ಮೇಲೆ ಸಾಲಾಗಿ ಕೂರುತ್ತಿದ್ದೆವು.

ಅಷ್ಟರಲ್ಲಿ ಹೊಲಕ್ಕೆ ಬುತ್ತಿ ತೆಗೆದುಕೊಂಡು ಹೋಗುವ ಹೊತ್ತಾಗುತ್ತಿತ್ತು. ನಸುಕಿನಲ್ಲೇ ಎದ್ದು, ಬೇಸಾಯಕ್ಕೆ ಹೋದ ದೊಡ್ಡಪ್ಪನವರಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದೆವು. ಮುದ್ದೆ,ಅನ್ನ, ಸಾರು, ಮೊಸರು, ಮಜ್ಜಿಗೆ, ಚಟ್ನಿ ಎಲ್ಲಾ ಒಂದು ಬಿದಿರಿನ ಬುಟ್ಟಿಯಲ್ಲಿ ಇಟ್ಟುಕೊಂಡು ನಮ್ಮ ದೊಡ್ಡಮ್ಮ ಹೊರಟರೆ, ಅವರ ಜೊತೆ ನಾವೂ ಹೊರಡುತ್ತಿದ್ದೆವು. ಬುಟ್ಟಿ ಹೊರಲು ನಾ ಮುಂದು ತಾ ಮುಂದು ಅಂತ ಜಗಳ. ಸ್ವಲ್ಪ ಸ್ವಲ್ಪ ದೂರ ಒಬ್ಬೊಬ್ಬರ ತಲೆ ಮೇಲೆ ಇಡುತ್ತಿದ್ದರು. ನಾವು ಹೊಲ ಮುಟ್ಟುವಷ್ಟರಲ್ಲಿ ಮಜ್ಜಿಗೆ ಸಾರು ತುಳುಕಾಡಿ ಚೆಲ್ಲಿ ದೊಡ್ಡಮ್ಮನ ಕೈಯಲ್ಲಿ ಬೈಸಿಕೊಳ್ಳುತ್ತಿದ್ದೆವು. ಹೊಲ ಮುಟ್ಟಿದ ನಂತರ ಬಾವಿಯ ಬಳಿಯಲ್ಲಿದ್ದ ಮಾವಿನ ಮರದ ಕೆಳಗೆ ಬುಟ್ಟಿ ಇಟ್ಟುಕೊಂಡು ಕೂರುತ್ತಿದ್ದೆವು. ಅಷ್ಟರಲ್ಲಿ ಪಂಪ್ ಚಾಲು ಮಾಡಿದ್ದರೆ, ಅಲ್ಲಿ ನೀರಿನಲ್ಲಿ ಆಟವಾಡಿ, ಬಟ್ಟೆಯನ್ನೆಲ್ಲ ನೆನೆಸಿಕೊಂಡು, ಬಿಸಿಲಿನಲ್ಲಿ ಒಣಗಿಸಿಕೊಳ್ಳುತ್ತಿದ್ದೆವು. ದೊಡ್ಡಪ್ಪನವರು ಕೈಕಾಲು ಮುಖ ತೊಳೆದು ಊಟಕ್ಕೆ ಬರುತ್ತಿದ್ದರು. ಅವರ ಜೊತೆ ನಾವೂ (ಮನೆಯಲ್ಲಿ ತಿಂದು ಬಂದಿದ್ದರೂ ಸಹ) ತಿನ್ನಲು ಕೈ ಒಡ್ಡಿ ಕೂರುತ್ತಿದ್ದೆವು. ಇದು ಮೊದಲೇ ಗೊತ್ತಿದ್ದ ದೊಡ್ಡಮ್ಮ ಸ್ವಲ್ಪ ಜಾಸ್ತಿಯೇ ಇಟ್ಟುಕೊಂಡು ಬಂದಿರುತ್ತಿದ್ದರು. ಅವರ ಜೊತೆ ಮಾವಿನ ಮರದ ನೆರಳಿನಲ್ಲಿ ಊಟ ಮಾಡಿ, ಅವರ ಜೊತೆ ನೇಗಿಲು ಹಿಡಿದು ಹೊಲ ಉಳಲು ಹೋಗುತ್ತಿದ್ದೆವು. ನಿಮಗೆ ಆಗೊಲ್ಲ ಬಿಡ್ರೋ ಅಂದರೂ ಬಿಡದೆ ಹಠ ಮಾಡಿ ಸ್ವಲ್ಪ ದೂರ ಜೊತೆಯಲ್ಲಿ ಹೋಗುತ್ತಿದ್ದೆವು. ನಂತರ ಬಾವಿಯ ಬಳಿ ಬಂದು ಬಟ್ಟೆ ಬಿಚ್ಚಿ ಬಾವಿ ಒಳಗೆ ಇಳಿಯಲು ಮಾಡಿದ ದಾರಿಯಲ್ಲಿ ಇಳಿದು, ನೀರಿನ ಆಳಕ್ಕೆ ತಕ್ಕಂತೆ ಮೇಲಿನಿಂದ ಎಗರಿ ಈಜುತ್ತಿದ್ದೆವು. ಎಷ್ಟೋ ಹೊತ್ತಿನ ನಂತರ ನಮ್ಮ ದೊಡ್ಡಮ್ಮ ಸಾಕು ನಡಿರೋ ಹೊತ್ತಾಯಿತು ಮನೆಗೆ ಹೋಗಬೇಕು ಎನ್ನುತ್ತಿದ್ದರು. ಮತ್ತೆ ಖಾಲಿ ಬುಟ್ಟಿ ಹೊರಲು ಪೈಪೋಟಿ. ಈಗ ಚೆಲ್ಲುವಂತಹದು ಏನೂ ಇರದಿದ್ದರಿಂದ, ದೊಡ್ಡಮ್ಮನೂ ನಿರಾತಂಕವಾಗಿ ಬುಟ್ಟಿ ಹೊರಿಸುತ್ತಿದ್ದರು.

ಮನೆಗೆ ಬಂದು ಸ್ವಲ್ಪ ಹೊತ್ತು ಚೌಕ ಬಾರ, ಗೊಟ್ಟು ಗುಣಿ ಆಡಿ, ಏನಾದರೂ ರುಬ್ಬುವುದು, ಬೀಸುವುದು ಇದ್ದರೆ ಅಲ್ಲೂ ದೊಡ್ಡಮ್ಮನವರಿಗೆ ಸಹಾಯ (ಸಹಾಯಕ್ಕಿಂತ ನಮ್ಮಿಂದ ಅವರಿಗೆ ತೊಂದರೆಯೇ ಜಾಸ್ತಿ) ಮಾಡುತ್ತಿದ್ದೆವು. ಅಷ್ಟು ಹೊತ್ತಿಗೆ ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿ. ಸ್ವಲ್ಪ ಬಿಸಿಲು ಕಡಿಮೆ ಆದ ಮೇಲೆ ಬಟ್ಟೆ ಒಗೆಯುವ ಕಾರ್ಯಕ್ರಮ. ಎಲ್ಲರೂ ಬಿಟ್ಟ ಬಟ್ಟೆಗಳನ್ನು ಎಷ್ಟು ಜನರಿರುತ್ತಾರೋ ಅಷ್ಟು ಗಂಟುಗಳನ್ನು ಮಾಡಿ, ತಲೆ ಮೇಲೆ ಹೊರೆಸುತ್ತಿದ್ದರು. ಎಲ್ಲಾ ಊರ ಮುಂದಿನ ಹಳ್ಳಕ್ಕೆ ಹೋಗಿ ಒಬ್ಬೊಬ್ಬರು ಒಂದೊಂದು ಬಂಡೆಗಳನ್ನು ಹಿಡಿದು, ಆ ಬಂಡೆಗಳನ್ನು ತೊಳೆದು, ಕೂರುತ್ತ ಇದ್ದೆವು. ಇದೆಲ್ಲಾ ನಮ್ಮ ದೊಡ್ಡಮ್ಮನ ತರಬೇತಿ. ಅಷ್ಟರಲ್ಲೇ ದೊಡ್ಡಮ್ಮ ಚಿಕ್ಕ ಚಿಕ್ಕ ಬಟ್ಟೆಗಳನ್ನು ನೀರಿನಲ್ಲಿ ನೆನೆಸಿ ಸೋಪು ಹಾಕಿ ನಮಗೆ ಒಗೆಯಲು ಕೊಡುತ್ತಿದ್ದರು. ಬಟ್ಟೆಯನ್ನು ಒಗೆಯುವಾಗ, ಬಟ್ಟೆ ಕುಪ್ಪೆ, ಕುಪ್ಪೆ ಬೀಳಬೇಕು, ಇಲ್ಲದಿದ್ದರೆ, ಬಟ್ಟೆ ಹರಿದು ಹೋಗುತ್ತದೆ ಎಂದು ಹೇಳುತ್ತಿದ್ದರು. ನಾವು ಬಟ್ಟೆ ಒಗೆದು ನೀರಿನಲ್ಲಿ ಜಾಲಾಡಿಸಿ ಸೋಪ್ ಎಲ್ಲಾ ಹೋದ ನಂತರ ಹಿಂಡಿ ಒಣಹಾಕಿ. ಬಂದು ಮುಂದಿನ ಬಟ್ಟೆ ತೆಗೆದುಕೊಳ್ಳುತ್ತಿದ್ದೆವು. ಈ ರೀತಿ ಬಟ್ಟೆ ಒಗೆಯುವುದೆಲ್ಲ ಮುಗಿದ ಮೇಲೆ, ಸ್ವಲ್ಪ ನೀರು ಜಾಸ್ತಿ ಇರುವ ಕಡೆ ನೀರಿನಲ್ಲಿ ಮಲಗಿ, ಕೈ ಮೈ ಎಲ್ಲಾ ಉಜ್ಜಿಕೊಂಡು, ಹಾಗೆ ಮರಳಿನ ಮೇಲೆ ಹೋಗಿ ಮೈ ಒಣಗಿಸಿ ಕೊಳ್ಳುತ್ತಿದ್ದೆವು. ಅಷ್ಟರಲ್ಲಿ ನಾವು ಒಗೆದು ಹಾಕಿದ ಬಟ್ಟೆಗಳು ಒಣಗಿರುತ್ತಿದ್ದವು. ಅವುಗಳನ್ನು ಅಚ್ಚುಕಟ್ಟಾಗಿ ಮಡಚುತ್ತಿದ್ದೆವು. ಸೀರೆ ಪಂಚೆಗಳಾದರೆ ಇಬ್ಬಿಬ್ಬರು ಸೇರಿ ಮಡಚುತ್ತಿದ್ದೆವು. ಈ ರೀತಿ ಒಗೆದ ಬಟ್ಟೆಗಳನ್ನು ಮತ್ತೆ ಗಂಟು ಕಟ್ಟಿಕೊಂಡು ಮನೆಗೆ ಬರುತ್ತಿದ್ದೆವು. ಅಷ್ಟು ಹೊತ್ತಿಗೆ ಅದು ನೀರು ಸೇದುವ ಸಮಯ.

ಪಕ್ಕದಲ್ಲೇ ಇದ್ದ ಸೇದೋ ಬಾವಿಗೆ ಹಗ್ಗ ಕೊಡಪಾನಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಆಗ ಊರಿನ ಬೇರೆ ಜನರೂ ನೀರು ಸೇದಲು ಬರುತ್ತಿದ್ದರು. ನಾವು ನಮ್ಮ ಸರತಿಗಾಗಿ ಕಾಯುತ್ತಾ ನಮ್ಮ ಮುಂಚೆ ಇದ್ದವರಿಗೆ ಸಹಾಯ ಮಾಡಿ, ನಮ್ಮ ಕೊಡಪಾನ ಬಾವಿಯಲ್ಲಿ ಬಿಟ್ಟು ನಮ್ಮ ಮುಂದಿನ ಸರದಿಗೆ ಕಾಯುವವರ ಸಹಾಯದಿಂದ ನೀರು ಹೊತ್ತುಕೊಂಡು ಬರುತ್ತಿದ್ದೆವು. ಹೀಗೆ ಮನೆಯಲ್ಲಿ ಇರುವ ಕೊಳಗ, ಸೋರೆ, ಎಲ್ಲಾ ತುಂಬಿದ ಮೇಲೆ, ತುಂಬಿದ ಕೊಡಪಾನಗಳನ್ನು ಇಳಿಸಬೇಕಾಗಿತ್ತು. ಅಷ್ಟೊತ್ತಿಗೆ ಕತ್ತಲಾಗುವ ಸಮಯ. ಮನೆಯಲ್ಲಿರುವ ಲಾಟೀನು, ದೀಪಗಳ ಗಾಜುಗಳನ್ನು ಬೂದಿಯಿಂದ ತಿಕ್ಕಿ ತೊಳೆದು, ಅವುಗಳಿಗೆ ಸೀಮೆಎಣ್ಣೆ ತುಂಬಿಸಿ ರೆಡಿ ಮಾಡುತ್ತಿದ್ದೆವು. ಕತ್ತಲಾದ ನಂತರ ದೇವರ ದೀಪ ಹಚ್ಚಿ ಲಾಟೀನುಗಳನ್ನು ಹಚ್ಚಿ ಇಡುತ್ತಿದ್ದರು. ಆಗ ನಾವೆಲ್ಲ ಲಾಟೀನು ಬೆಳಕಿನಲ್ಲಿ ಸುತ್ತ ಕುಳಿತು ಸ್ವಲ್ಪ ಹೊತ್ತು ಓದುವುದು ಬರೆಯುವುದು ಮಾಡಬೇಕಾಗಿತ್ತು. ಅಷ್ಟರಲ್ಲಿ ರಾತ್ರಿ ಅಡುಗೆ ತಯಾರಾಗುತ್ತಿತ್ತು. ರಾತ್ರಿ ಊಟ ದೊಡ್ಡಪ್ಪನವರ ಜೊತೆ ಕುಳಿತು ಬಿಸಿ ಬಿಸಿ ಅನ್ನ, ತುಪ್ಪ, ಉಪ್ಪು ಮಿಟಿಕೆ ಮಾಡಿ ತಿನ್ನುತ್ತಿದ್ದೆವು. ಊಟದ ನಂತರ ದೊಡ್ಡ ಕಟ್ಟೆಯ ಮೇಲೆ ದೊಡ್ಡದೊಂದು ಜಮಖಾನ ಹಾಸಿರುತ್ತಿದ್ದರು. ಅದರ ಮೇಲೆ ನಾವು ರಾತ್ರಿ ನಿದ್ದೆ ಬರುವವರೆಗೂ, ಆಕಾಶ ನೋಡುತ್ತಾ, ನಕ್ಷತ್ರ ಎಣಿಸುತ್ತ, ಹರಟೆ ಹೊಡೆಯುತ್ತಾ, ಮಲಗುತ್ತಿದ್ದೆವು.

ಇದು ನಮ್ಮ ಬೇಸಿಗೆ ರಜೆಯಲ್ಲಿ ಅಜ್ಜಿ ಊರಿನ ಒಂದು ದಿನದ ದಿನಚರಿ.

**- ಟಿ ವಿ ಬಿ ರಾಜನ್**, ಬೆಂಗಳೂರು




# ಆಕರ್ಷಕ ಬಿಳಿ ಬಣ್ಣದ ಬಾತುಕೋಳಿ

ನಮ್ಮ ಮನೆಯಿಂದ ಮುಖ್ಯರಸ್ತೆಗೆ ಬರುವ ದಾರಿಯಲ್ಲಿ ಕೆಲವು ಗದ್ದೆಗಳು ಇದ್ದವು. ಮಳೆಗಾಲದಲ್ಲಿ ಬೀಳುವ ನೀರು ಎಲ್ಲಾ ಕಡೆ ತುಂಬಿಕೊಳ್ಳುತ್ತಿತ್ತು. ಒಂದು ಗದ್ದೆಯಿಂದ ಇನ್ನೊಂದಕ್ಕೆ ಹರಿದು ಮುಂದೆ ಸಣ್ಣ ತೋಡಿನಲ್ಲಿ ಸೇರಿಕೊಂಡು ಅಲ್ಲಿಂದ ಮುಂದೆ ನದಿಯಲ್ಲಿ ಸೇರಿಕೊಳ್ಳುತ್ತಿತ್ತು. ಇದೊಂದು ಗದ್ದೆ ಬಹಳ ತಗ್ಗಿನಲ್ಲಿತ್ತು. ಹಲವಾರು ವರ್ಷಗಳಿಂದ ಅಲ್ಲಿ ಯಾವುದೇ ಬೆಳೆಯನ್ನು ಬೆಳೆಯದ ಕಾರಣ ಅಲ್ಲಿ ಸದಾ ನೀರು ತುಂಬಿರುತ್ತಿತ್ತು. ಜೊತೆಗೆ ಜಲಸಸ್ಯಗಳು ಬೆಳೆದುಕೊಂಡು ಅದೊಂದು ಸುಂದರ ಕೆರೆಯಾಗಿ ಮಾರ್ಪಟ್ಟಿತ್ತು. ಬೇಸಗೆ ಕಾಲದಲ್ಲಿಯೂ ಅಲ್ಲಿ ಸಾಕಷ್ಟು ನೀರು ಇರುತ್ತಿತ್ತು. ವರ್ಷಪೂರ್ತಿ ತಾವರೆ ಹೂಗಳು ಅರಳುತ್ತಿದ್ದವು. ಆದರೆ ಆ ಕೆರೆಯಲ್ಲಿ ಕೋಣಗಳು ಮಾತ್ರ ಬೇಸಗೆಯಲ್ಲಿ ಮಲಗಿಕೊಂಡು ಬಿಸಿಲಿನಿಂದ ತಂಪು ಮಾಡಿಕೊಳ್ಳುತ್ತಿದ್ದವು. ನಾವು ತಾವರೆ ಹೂ ಕೊಯ್ಯಲು ಹೋದರೆ ಕೆಸರಿನಲ್ಲಿ ಕಾಲು ಹೂತುಹೋಗುತ್ತಿತ್ತು.


ಮಧ್ಯದಲ್ಲಿ ತುಂಬಿರುವ ನೀರಿನಲ್ಲಿ ಸದಾ ಕೆಲವು ಬಾತುಕೋಳಿಗಳು ಇರುತ್ತಿದ್ದವು. ಯಾವಾಗ ಪಕ್ಷಿ ವೀಕ್ಷಣೆಯ ಹವ್ಯಾಸ ಪ್ರಾರಂಭವಾಯಿತೋ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಲು ಪ್ರಾರಂಭ ಮಾಡಿದೆ. ನೀರಿನಲ್ಲಿ ಈಜುತ್ತಾ ಜಲಸಸ್ಯಗಳನ್ನು ತಿನ್ನುವ ಹಲವಾರು ಬಾತುಗಳು ಇದ್ದವು. ಒಂದುದಿನ ಸೂಕ್ಷ್ಮವಾಗಿ ನೋಡಿದಾಗ ಕಂದು ಬಣ್ಣದ ಸಿಳ್ಳೆಬಾತುಗಳ ಜೊತೆಗೆ ಅವುಗಳಿಗಿಂತ ಸ್ವಲ್ಪ ಚಿಕ್ಕದಾದ ಬಿಳೀ ಬಣ್ಣದ ಬಾತುಗಳು ಕಾಣಿಸಿದವು. ಆ ಮೇಲೆ ಪ್ರತಿದಿನವೂ ಗಮನಿಸುವಾಗ ಈ ಬಿಳಿ ಬಣ್ಣದ ಬಾತುಗಳು ಕಾಣಸಿಗುತ್ತಿದ್ದವು. ಕೆಲವೊಮ್ಮೆ ಬಿಳಿಬಾತುಗಳ ಗುಂಪು ಬೇರೆಯಾಗಿ ಈಜುವಾಗ ಅವುಗಳಲ್ಲಿ ಗಂಡು ಹಕ್ಕಿಗೆ ಮಾತ್ರ ಈ ಬಿಳಿ ಬಣ್ಣ ಎದ್ದು ಕಾಣುವುದು ತಿಳಿಯಿತು. ರೆಕ್ಕೆಯ ವಿನ್ಯಾಸ ಗಾತ್ರ ಮತ್ತು ಮೈಮೇಲಿನ ಗೆರೆಗಳು ಹೆಣ್ಣು ಹಕ್ಕಿಗೂ ಅದೇರೀತಿ ಇತ್ತು. ತಲೆಯಮೇಲೆ ಬಾಚಿದ ಕೂದಲಿನಂತಹ ಕೇಶವಿನ್ಯಾಸ, ರೆಕ್ಕೆಯ ಮೇಲಿನ ಪಟ್ಟೆಗಳು ಈ ಹಕ್ಕಿಯನ್ನು ಉಳಿದ ಸಿಳ್ಳೆ ಬಾತುಗಳಿಗಿಂತ ಸುಂದರವಾಗಿ ಕಾಣುವಂತೆ ಮಾಡುತ್ತಿದ್ದವು. ಕೆರೆಯಲ್ಲಿ ಬೆಳೆಯುವ ಜಲಸಸ್ಯಗಳು ಮತ್ತು ಕೀಟಗಳೇ ಇದರ ಮುಖ್ಯ ಆಹಾರ. ಜುಲೈನಿಂದ ಆಗಸ್ಟ್ ತಿಂಗಳ ನಡುವೆ ಮಾನ್ಸೂನ್ ಕಾಲದಲ್ಲಿ ಕೆರೆಯ ನಡುವೆ ಅಥವಾ ಬದಿಯಲ್ಲಿ ಬೆಳೆದ ಮರಗಳ ಮೇಲೆ ಗೂಡುಕಟ್ಟಿ ಸಂತಾನಾಭಿವೃದ್ಧಿ ಮಾಡುತ್ತವೆ.

ಆದರೆ ಒಂದು ದಿನ ಆ ಗದ್ದೆಗೆ ಮಣ್ಣು ತುಂಬಿಸಲು ಪ್ರಾರಂಭ ಮಾಡಿದರು. ಕೆಲವೇ ದಿನಗಳಲ್ಲಿ ಎಲ್ಲಿಂದಲೋ ತಂದ ಕಟ್ಟಡದ ಒಡೆದ ಕಾಂಕ್ರೀಟ್ ತುಂಡುಗಳನ್ನೆಲ್ಲ ತುಂಬಿ, ಮಣ್ಣುಹಾಕಿ ಚಂದದ ಕೆರೆಯನ್ನು ಮುಚ್ಚಿಬಿಟ್ಟರು. ಕೆಲವು ದಿನ ಆ ಜಾಗ ಕ್ರಿಕೆಟ್ ಆಟದ ಮೈದಾನವಾಗಿತ್ತು. ಆದರೆ ಈಗ ಅಲ್ಲೊಂದು ದೊಡ್ಡ ವಸತಿ ಸಂಕೀರ್ಣ ತಲೆ ಎತ್ತುತ್ತಿದೆ. ಅಲ್ಲೊಂದು ಕೆರೆ ಇತ್ತು, ಅಲ್ಲಿ ಹಕ್ಕಿಗಳು ಇತ್ತು ಎನ್ನುವ ಕುರುಹೂ ಇಲ್ಲದಾಗಿದೆ. ಇದು ನಮ್ಮ ಮನೆಯ ಹತ್ತಿರದ ಈ ಗದ್ದೆಯ ಸ್ಥಿತಿ ಮಾತ್ರವಲ್ಲ ಕರಾವಳಿ ಜಿಲ್ಲೆಗಳ ಹಲವಾರುಕಡೆ, ರಾಷ್ಟ್ರೀಯ



ಹೆದ್ದಾರಿಯ ಬದಿಗಳಲ್ಲಿ ಇಂತಹ ಕೆರೆಗಳು ಹಲವು ಕಡೆ ಇದ್ದವು. ಅದರಲ್ಲಿ ಕನಿಷ್ಟ ಹತ್ತಿಪ್ಪತ್ತು ಬಗೆಯ ಹಕ್ಕಿಗಳು, ಹಲವು ಬಗೆಯ ಜಲಸಸ್ಯಗಳು ಕಣ್ಣಿಗೆ ಕಾಣದ ಇನ್ನೆಷ್ಟೋ ಜೀವಿಗಳು ಇರುತ್ತಿದ್ದವು. ಸುತ್ತಮುತ್ತಲಿನ ಬಾವಿಗಳಲ್ಲಿ ಬೇಸಿಗೆಯಲ್ಲೂ ನೀರು ಇರುತ್ತಿತ್ತು. ಆದರೆ ಅಭಿವೃದ್ಧಿ ಅದನ್ನೆಲ್ಲ ಮುಚ್ಚಿಹಾಕುತ್ತಿದೆ. ಕೆಲವು ಕಡೆ ಕೆರೆಗಳಸುತ್ತ ಬೆಳೆದ ಮರಗಳನ್ನು ಕಡಿದು, ಕಟ್ಟೆಯನ್ನು ಕಟ್ಟಿ, ಸುತ್ತಲೂ ಕಬ್ಬಿಣದ ಬೇಲಿಯನ್ನು ನಿರ್ಮಿಸಿ ಅದರ ಸುತ್ತಲೂ ಇಂಟರ್‌ಲಾಕ್ ಅಳವಡಿಸಿ ಮಾನವರ ವಾಯುವಿಹಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ. ಆದರೆ ಕೆರಯಲ್ಲಿ ನೀರು ಮತ್ತು ಹಕ್ಕಿಗಳು ಕಡಿಮೆಯಾಗುತ್ತಿವೆ.

**- ಅರವಿಂದ ಕುಡ್ಲ**, ಬಂಟ್ವಾಳ



# ಜೀವನದ ಎರಡು ಮುಖಗಳು

ನಾವು ಪ್ರತಿನಿತ್ಯ ನಮ್ಮ ಜೀವನದಲ್ಲಿ ನಮ್ಮ ಸುತ್ತಮುತ್ತ ಅನೇಕ ವ್ಯಕ್ತಿಗಳು, ಅವರ ಮಾತು, ಕ್ರಿಯೆ ನೋಡ್ತಾ ಇದ್ರೂ ಗಮನಿಸೋದೇ ಇಲ್ಲ. ಅದಕ್ಕೆ ನಮ್ಮ ಬಳಿ ಸಮಯ ಇಲ್ಲ. ಸಮಾಜದಲ್ಲಿ ಇತರರ ಬಗ್ಗೆ ಗಮನಿಸುವ ಆಸಕ್ತಿ ಕುತೂಹಲ ಇರೋದೆ ಇಲ್ಲ. ಆದರೆ ನಾನು ಪ್ರತಿನಿತ್ಯ ಸಮಾಜಮುಖಿ ಆಸಕ್ತಿಯಿಂದ ಗಮನಿಸ್ತಿರ್ತಿನಿ.

ಮೊನ್ನೆ ನಂಜನಗೂಡಿಂದ ಮೈಸೂರಿಗೆ ಮಧ್ಯಾಹ್ನ 3.30ಗೆ ಸರಕಾರಿ ಕೆಂಪು ಬಸ್ಸಿನಲ್ಲಿ ಬರ್ತಿದ್ದೆ. ನನ್ನ ಪಕ್ಕ ಕೂತಿದ್ದ ಒಬ್ಬ ಯುವತಿ ಸತತ ಒಂದರ ಮೇಲೊಂದರಂತೆ ಯರ‍್ಯಾರಿಗೋ ಫೋನ್ ಮಾಡಿ ದಬಾಯಿಸಿ ಬೈತಿದ್ದ ಗಡಸುತನ ಕಂಡೆ. ಬಸ್‌ನ ಹೊರಗಿಂದ ಒಬ್ಬ ಯುವಕ ಆಕೆಯನ್ನು ಬಾ ಬಾ ಎಂದು ಬಲವಂತವಾಗಿ ಕರೆಯುತ್ತಾ, ಆಕೆಯ ಕೈ ಹಿಡಿದು ಹೊರಗೆ ಬರಲು ಕರೆದರೂ, ಆಕೆ ನಾ ಬರೋಲ್ಲ ಮನೆಗೆ ಅಂತಿದ್ದಳು. ಆಕೆಯ ಬಗ್ಗೆ ಕುತೂಹಲ-ಅನುಕಂಪ. ಆದರೆ ಏನಾದರೂ ನಾ ಕೇಳಿದರೆ, ಆಕೆ ಸಿಡಿದರೆ ಎಂದು ಸುಮ್ಮನಾದೆ.

ಆ ಪಕ್ಕದ ಬದಿ ಸೀಟಿನಲ್ಲಿ ಒಬ್ಬ ವಯಸ್ಸಾದ ಹಳ್ಳಿಯ ರೈತ. ಆತನ ಪಕ್ಕ ಒಬ್ಬ ಮಧ್ಯವಯಸ್ಸಿನ ಮಹಿಳೆ, ಆತನ ತಲೆ, ಕೆನ್ನೆ ಸವರುತ್ತಾ ಕಣ್ಣೀರು ಸುರಿಸಿ ಅಳುತ್ತಾ ಉಷಾರಾಗಿ ಮನೆಗೆ ಹೋಗ್ತಿಯಪ್ಪ ಅಂತಿದ್ದಳು ನಾನು ಏನೆಂದು ವಿಚಾರಿಸಿದೆ. ಆಕೆ ಹೇಳಿದಳು ಇವರಿಗೆ ಆಸ್ಪತ್ರೆಲಿ ಇ.ಸಿ.ಜಿ ಕಣ್ಣಿನ ತಪಾಸಣೆ ಎಲ್ಲ ಪರೀಕ್ಷೆ ಮಾಡಿಸಿದರು. ಇವರಿಗೆ 3 ದಿನಗಳ ನಂತರ ಕಣ್ಣಿನ ಆಪರೇಷನ್ ಇದೆ. ಈಗ ಅವರೊಬ್ಬರೇ ನಮ್ಮ ಹಳ್ಳಿ ಗದ್ದಿಗೆಗೆ ಹೋಗ್ತಿದಾರೆ. ಕಂಡಕ್ಟರ್ ಹೇಳಿದರು. ಈ ಬಸ್ ನಂಜನಗೂಡಿಂದ ಮೈಸೂರು ಸಿಟಿ ಬಸ್ ಸ್ಟಾಂಡ್‌ಗೆ ಹೋಗುತ್ತಂತೆ. ಅವರಿಗೆ ಅಲ್ಲಿಂದ ದೊಡ್ಡ ಬಸ್‌ಸ್ಟಾಂಡಿಗೆ ಹೋಗಲು ಗೊತ್ತಾಗೊಲ್ಲ.

ನೀನ್ಯಾರು ನಾನು ಕೇಳಿದೆ. ನಾನು ಇವರ ಮಗಳು ಎಂದಳು. ನೀನ್ಯಾಕೆ ಅವರ ಜೊತೆ ಹೋಗೋಲ್ಲ ಕೇಳಿದೆ. ನಾನು ಕಡಕೊಳದಲ್ಲಿ ಇಳೀಬೇಕು. ಮನೇಲಿ ಹಸುಗಳಿಗೆ ಇನ್ನೂ ಹುಲ್ಲು ಹಾಕಿಲ್ಲ. ಶಾಲೆ-ಕಾಲೇಜಿಗೆ ಹೋದೆ. ನನ್ನ 2 ಹೆಣ್ಣು ಮಕ್ಕಳು ಮನೆಗೆ ಬರೋ ಸಮಯ ಅವರಿಗೆ ಕೊಡಬೇಕು. ನನ್ನ ಗಂಡನಿಗೆ ಅಡಿಗೆ ಮಾಡಬೇಕು. ಆಕೆ ಅಳುತ್ತಲೇ ಹೇಳಿದಳು.

ಅಲ್ಲಮ್ಮ ಇವನ ಹೆಂಡತಿ ಎಲ್ಲಿ ಆಕೆ ಗದ್ದಿಗೆ ಹಳ್ಳೀಲಿ ಹಳ್ಳೀ ಮನೆ, ಜಮೀನು ಕೆಲಸ, ದನಕರು ನೋಡ್ಕೋಳ್ಳೋ ಕೆಲಸದಲ್ಲಿ ಪುರುಸೊತ್ತೇ ಇಲ್ಲ

ಅಲ್ಲಮ್ಮ ಇಷ್ಟು ಅಳ್ತಿದಿಯಲ್ಲ ತಾಯಿ ನಿನ್ನ ಮದುವೆ ಆಗಿ ಎಷ್ಟು ವರ್ಷ? ಅಣ್ಣಾ 17 ವರ್ಷ ಆಯ್ತು. ಅದ್ರು ನಮ್ಮ ಅಪ್ಪನ್ನ ಕಂಡ್ರೆ ನಂಗೆ ಬೋ ಪ್ರೀತಿ ಎನ್ನುತ್ತಾ ಅಪ್ಪ ನನ್ನ ಕಟ್ಟಿಕೊಂಡಳು. ನನ್ನ ಕಣ್ಣಲ್ಲೂ ನೀರು. ಮುಖದಲ್ಲಿ ಸಂತಸ. ಅಲ್ಲಮ್ಮ ಮದ್ವೆ ಆಗಿ 17 ವರ್ಷ ಆದರೂ ಈ ಅಪ್ಪನ್ನ ಕಂಡು, ಅವನನ್ನ ನಂಜನಗೂರು ಆಸ್ಪತ್ರೆಗೆ ಕರೆತಂದು ವಾಪಸ್ ಬಸ್‌ನಲ್ಲಿ ಹತ್ತಿಸಿದ್ದಿ. ಅವನ ಜೇಬಲ್ಲಿ ಬಸ್ ಟಿಕೆಟ್ಟು ಕೆಲವು ನೋಟ್‌ಗಳು ಹಾಕಿ ಹತ್ತು ಬಾರಿ ಹುಷಾರಾಗಿ ಹೋಗಿ ಬಾ ಜೋಪಾನ ಎನ್ನುತ್ತ ಧಾರಾಕಾರ ಕಣ್ಣೀರು ಸುರಿಸಿದಾಗ ನನಗೂ ಅಳು ಬಂತು. ಈ ಮಗಳು ಅಪ್ಪನ ಬಗ್ಗೆ ತಾಳಿರುವ ಪ್ರೀತಿ, ಗೌರವ ಬಗ್ಗೆ.

ಆಗ ಕುಟುಂಬದ ಮಹತ್ವವೇ ಹೀಗೆ ಅಂದೆ ಕಂಡಕ್ಟರ್‌ಗೆ ಆಕೆ ವಿನಂತಿಸಿದಳು. ಅಪ್ಪಾಗೆ ದೊಡ್ಡ ಬಸ ಸ್ಟಾಂಡ್ ತಲುಪಿಸಿ ಎಂದು ನನ್ನ ಬಳಿಯೂ ಹಾಗೆ ಕೇಳಿಕೊಂಡಾಗ ಆ ಕಂಡಕ್ಟರ್ ನಗುತ್ತ ತಮಾಷೆ ಮಾಡಿದೆ. ಅಲ್ಲಮ್ಮ ಈ ಬಸ್‌ನಲ್ಲಿರುವ ಎಲ್ಲರ ಬಳಿ ಹೇಳಿದಿಯಲ್ಲ ನನ್ನ ಬಗ್ಗೆ ನಂಬಿಕೆ ಇಲ್ವಾ ಆಕೆ ಕಡಕೊಳದಲ್ಲಿ ಇಳಿಯುವಾಗಲೂ ಅಪ್ಪಾ ಜೋಪಾನ ನಿಂಗೆ ಚೆನ್ನಾಗಿ ಕಣ್ಣು ಕಾಣೋಲ್ಲ ಅನ್ನುತ್ತಾ ಇಳಿದಳು.

ಆ ಈ ಪಕ್ಕದ ಹುಡುಗೆ ಬಾಯಿ ಬಿಟ್ಟಳು. ಅಣ್ಣಾ ನನ್ನ ಮನೆಯವರೆಲ್ಲ ಕೆಟ್ಟಮ್ರು. ಅಮ್ಮಾ, ಮಾಮಂದಿರು ತಂಗಿ ಆಕೆ ಗಂಡ ಎಲ್ಲ ಸ್ವಾರ್ಥಿಗಳು. ಯಾಕಮ್ಮ ಹೀಗಂತಿ? ಕೇಳಿದ. ನಾನು ಒಬ್ಬನ್ನ ಲವ್ ಮಾಡಿದೆ. ನಮ್ಮ ಸೋದರಮಾವನ ಮಗನ್ನ ಮನೇಲಿ ಮಾವಂದಿರು ನಮ್ಮಮ್ಮ ಒಪ್ಪಲಿಲ್ಲ ಬೆಂಗಳೂರು ಮಾವ-ಅತ್ತೆ ಒಪ್ಪಿ ನನ್ನ ಅವರ ಮಗನ ಲಗ್ನ ಫಿಕ್ಸ್ ಮಾಡಿ ಲಗ್ನಪತ್ರಿಕೇನ ಅವರ ಖರ್ಚಲ್ಲೇ ಮಾಡಿ 1 ವರ್ಷ ಆಯ್ತು. ನನ್ನ ಅಮ್ಮ ಬೇರೆ ಮಾವಂದಿರು ಖರ್ಚು ಮಾಡಲಿಲ್ಲ, ಭಾಗವಹಿಸಲೂ ಇಲ್ಲ ನಾ ಬೆಂಗಳೂರು ಮಾವನ ಮನೆಗೆ ಹೋಗ್ತೀನಿ ಅಂದ್ರೆ ನನ್ನ ಕಳಿಸೋಕೇ ಒಪ್ತಿಲ್ಲ. ನಾ ಅದಕ್ಕೆ ಜಗಳ ಆಡಿ ಬಸ್ ಹತ್ತಿದೀನಿ ತಂಗಿ ಗಂಡ ಬಂದು ಮನೇಗೆ ಕರೀತೀದಾನೆ

ಅಲ್ಲಮ್ಮ ಮದುವೆಗೆ ಮೊದಲು ಲವ್ವರ್ ಮನೆಗೆ ಹೋಗ್ತಿದಿಯಲ್ಲ?

ಅಯ್ಯೋ ಅಣ್ಣಾ ನನ್ನ ಎಂಗೇಜ್ ಮೆಂಟ್ ಆಗಿದೆ. ಈಗ ಅವರೇ ಕರೀತಿದಾರೆ. ಹೋಗ್ತಿದಿನಿ.

ಅಲ್ಲಮ್ಮ ನೀ ಬಂಗಳೂರು ತಲುಪಿ ಅವರ ಮನೆಗೆ ಹೋಗೋಕೆ ರಾತ್ರಿ ಆಗೋಲ್ವಾ

ನಂಗೇನು ಹೆದರಿಕೆ ನಾ 7ನೇ ಕ್ಲಾಸ್ ಓದಿದೀನಿ ನಂಗೆಲ್ಲ ಗೊತ್ತು. ನನ್ನ ಕಸಿನ್‌ಗೆ ಫೋನ್ ಮಾಡ್ತೀನಿ. ಅವನು ಬಂದು ಕಾರಲ್ಲಿ ಕರಕೊಂಡು ಹೋಗ್ತಾನೆ

ಹುಷಾರಮ್ಮ ಎಲ್ಲರ ಹತ್ತಿರ ಜಗಳ ಆಡಬೇಡ ಸಂಬಂ ಕೆಟ್ಟು ಹೋಗುತ್ತೆ. ನಾನೆಂದೆ.

ಅಣ್ಣಾ ನಂಗೆ 19. ನಾನು ಮೆಜಾರಿಟಿಗೆ ಬಂದಿದೀನಿ ಬೇರೆ ಯಾರ ಸಹಾಯವೂ ಬೇಡ ಅಂದ್ರು. ಹೆಣ್ಣಿನ 2 ಮುಖಗಳನ್ನು ಒಂದೇ ಬಾರಿ ಕಂಡೆ.

**- ಎನ್.ವ್ಹಿ.ರಮೇಶ್**

# ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಿ

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧಿಕಾರಿಗಳಿಗೆ ಸೂಚನೆ

ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ನಿಗಾ ವಹಿಸಿ ಸಾರ್ವಜನಿಕರಿಗೆ ಗುಣಮಟ್ಟದ ಶುದ್ಧ ನೀರು ಒದಗಿಸಲು ಅಧಿಕಾರಿಗಳು ಸಮನ್ವಯತೆಯಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಕುಡಿಯುವ ನೀರಿನ ಸಮಸ್ಯೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿ ಮಾತನಾಡಿದ ಅವರು, ಕುಡಿಯುವ ನೀರಿನ ಪೂರೈಕೆಗಾಗಿ ಸಮರ್ಪಕವಾಗಿ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಪ್ರತಿವಾರ ಒಂದು ದಿನ ನಿಗದಿಪಡಿಸಿಕೊಂಡು ಟಾಸ್ಕ್‌ಫೋರ್ಸ್ ಸಮಿತಿ ಸಭೆ ನಡೆಸಿ ಸಮಸ್ಯೆ ಕಂಡು ಬಂದಲ್ಲಿ ತಕ್ಷಣ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಜೊತೆಗೆ ಪ್ರೆಡ್‌ಶೀಟ್ ನಲ್ಲಿನಮೂದಿಸುವಂತೆ ಸೂಚಿಸಿದರು.



**ಹಸಿರು ಹಾಸನ:** ಜಿಲ್ಲೆಯನ್ನು ಹಸೀರಿಕರಣ ಮಾಡುವ ನಿಟ್ಟಿನಲ್ಲಿ 5 ಲಕ್ಷ ಗಿಡಗಳನ್ನು ನೆಡಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳ ಆವರಣ, ಶಾಲಾ, ಕಾಲೇಜು, ಹಾಸ್ಟೆಲ್ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಲು ಕ್ರಮ ವಹಿಸಬೇಕು.
**ಸ್ವಚ್ಛತಾ ಕಾರ್ಯ:** ಕಸವನ್ನು ಎಲ್ಲೆಂದರಲ್ಲಿ ಹಾಕುವುದರ ಜೊತೆಗೆ ರಸ್ತೆಯ ಅಕ್ಕಪಕ್ಕದಲ್ಲಿ ಕಸಹಾಕಿ ತಿಪ್ಪೆ ನಿರ್ಮಾಣ ಮಾಡುತ್ತಿದ್ದಾರೆ. ಅಂತವರನ್ನು ಗುರುತಿಸಿ ದಂಡ ವಿಧಿಸಿ ಸ್ವಚ್ಛ ಹಾಸನ ಜಿಲ್ಲೆ ನಿರ್ಮಾಣಕ್ಕೆ ಕ್ರಮ ವಹಿಸಲು ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಸೂಚಿಸಿದರು.

ಯಾವುದೇ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ದೂರುಗಳು ಬಂದಲ್ಲಿ ತಹಸೀಲ್ದಾರ್, ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸಿ ಕುಡಿಯಲು ಯೋಗ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ನೀರಿನ ಸಮಸ್ಯೆ ಕಂಡು ಬಂದಿರುವುದನ್ನು ಗಮನಿಸಿ ದುರ್ಬಲ ಪ್ರದೇಶಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ನೀರಿನ ಟ್ಯಾಂಕ್ ಸ್ವಚ್ಛಗೊಳಿಸಲು ಕ್ರಮವಹಿಸಿ ಜೊತೆಗೆ ರಿಪೇರಿಗೆ ಆದ್ಯತೆ ನೀಡಬೇಕು. ಖಾಸಗಿ ಅವರು ಕ್ಯಾನ್‌ಗಳಲ್ಲಿ ನೀರು ತುಂಬಿಸಿ ಸರಬರಾಜು ಮಾಡುತ್ತಿರುವ ನೀರನ್ನು ಕೂಡ ಪರಿಶೀಲಿಸಿ ನೀರಿನ ಗುಣ ಮಟ್ಟವನ್ನು ಪರೀಕ್ಷೆಗೆ ಒಳಪಡಿಸಿ. ಹೊಸ ಬೋರ್‌ವೆಲ್ ಕೊರೆಯುವಂತಿಲ್ಲ, ಇರುವ ಹಳೆಯ ಬೋರ್‌ವೆಲ್‌ಗಳನ್ನು ರಿಪೇರಿಗೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಪತ್ರಿಕೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಕಟಣೆಯಾಗುವ ಪತ್ರಿಕಾ ತುಣುಕುಗಳನ್ನು ಒಂದು ವಹಿಯನ್ನಿಟ್ಟು ದಾಖಲಿಸಿ ತಕ್ಷಣ ಸಮಸ್ಯೆ ಪರಿಹಾರಿಸಲು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದಾಖಲಿಸುವುದರ ಜೊತೆಗೆ ಜಿಲ್ಲಾಧಿಕಾರಿ ಅವರಿಗೆ ವರದಿ ನೀಡಬೇಕು. ಜಿಲ್ಲೆಯಲ್ಲಿರುವ ಜಲಾಶಯಗಳಲ್ಲಿ, ಕೆರೆಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣದ ಬಗ್ಗೆ ವರದಿ ನೀಡುವಂತೆ ನಿರ್ದೇಶನ ನೀಡಿದರು.

ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಗಮನಹರಿಸಿ ಯಾವ ಯಾವ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯ ಆಗಿದೆ ಎಂದು ಒಂದು ವಹಿಯಲ್ಲಿ ನಮೂದಿಸಲು ಕ್ರಮ ವಹಿಸಿ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ಸಹಾಯವಾಣಿ ಸಂಖ್ಯೆಯನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ತಹಸೀಲ್ದಾರ್ ಕಚೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸೂಚನೆ ನೀಡಿದರು.

ಬಾಣಾವರದಲ್ಲಿ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಜನರ ಆರೋಗ್ಯದ ಮೇಲೆ ಉಂಟಾಗಿರುವ ದುಷ್ಪರಿಣಾಮವನ್ನು ಶಮನಗೊಳಿಸಲು ಏನೇನು ಕ್ರಮ ಕೈಗೊಳ್ಳಬೇಕು ಎಂದು ಪರಿಶೀಲಿಸಬೇಕು. ಈ ಬಗ್ಗೆ ಸರಿಯಾದ ವರದಿ ನೀಡುವಂತೆ ಅವರು ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಬಾಬು ಹಾಗೂ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಸೀಲ್ದಾರ್‌ಗಳು ಉಪಸ್ಥಿತರಿದ್ದರು.

## ಸ್ವರ್ಣ ಗೌರಮ್ಮದೇವಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ಮಾಡಾಳು ಗ್ರಾಮ ರಾಜ್ಯದಲ್ಲಿಯೇ ಇತಿಹಾಸ ಪ್ರಸಿದ್ಧ ಹೊಂದಿರುವ ಪುಣ್ಯ ಕ್ಷೇತ್ರ. ಗ್ರಾಮದ ಮೂಲಸ್ಥಾನ ಸ್ವರ್ಣ ಗೌರಮ್ಮದೇವಿ ದೇವಾಲಯದಲ್ಲಿ ಶುಕ್ರವಾರ ರಾತ್ರಿ ನೂರಾರು ಭಕ್ತರ ಸಮ್ಮುಖದಲ್ಲಿ ಅಮಾವಾಸ್ಯೆ ವಿಶೇಷ ಪೂಜೆ ಶ್ರದ್ಧಾ ಭಕ್ತಿಯಿಂದ ಅದ್ದೂರಿಯಾಗಿ ಜರುಗಿತು.

ಹಾರನಹಳ್ಳಿ ಸುಕ್ಷೇತ್ರ ಕೋಡಿ ಮಠದ ಜಗದ್ಗುರು ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿಯವರ ಸಂಕಲ್ಪದಂತೆ ಲೋಕ ಕಲ್ಯಾಣಾರ್ಥವಾಗಿ ಪ್ರತಿ ತಿಂಗಳ ಅಮಾವಾಸ್ಯೆ ಯಂದು ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು ಈ ಬಾರಿಯೂ ಸಹ ಧಾರ್ಮಿಕ ವಿಧಿ ವಿಧಾನಗಳಿಂದ ಅಮ್ಮನವರಿಗೆ ಭಕ್ತಿ ಭಾವದಿಂದ ಪೂಜೆ ಸಲ್ಲಿಸಲಾಯಿತು.

ಪೂಜೆಯ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣ ಬಾಳೆ ಕಂದುಗಳಿಂದ ಶೃಂಗರಿಸಿದ್ದರೆ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿದ್ದು ಭಕ್ತರ ಕಣ್ಮನ ಸೆಳೆಯಿತು.

ಪೂಜೆ ಅಂಗವಾಗಿ ಸ್ವರ್ಣ ಗೌರಮ್ಮದೇವಿ ಭಾವಚಿತ್ರವನ್ನು ಬಗೆ ಬಗೆಯ ಹೂಗಳಿಂದ ಅಲಂಕರಿಸಿದ್ದು ವಿಶೇಷವಾಗಿತ್ತು.ರಾತ್ರಿ 8.30 ಗಂಟೆಗೆ ಸರಿಯಾಗಿ ಕೋಡಿಮಠದ ಮಹಾ ತಪಸ್ವಿಲಿಂಗೈಕ್ಯ ಶಿವಲಿಂಗ ಜ್ಜಯ್ಯ ಮೂರ್ತಿಗೆ ಹಾಗೂ ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸ ವೇಶ್ವರ ಸ್ವಾಮಿಯವರಿಗೆ ಪೂಜೆ ಸಲ್ಲಿಸಿ ಕರ್ಪೂರದಾರತಿ ಮೂಲಕ ಮಹಾ ಮಂಗಳಾರತಿ ನೆರವೇರಿಸಲಾಯಿತು.

# ವಿದ್ಯುತ್ ದರ ಯೂನಿಟ್‌ಗೆ 56 ಪೈಸೆ ಏರಿಕೆ

## ಜನರಿಗೆ ಕರೆಂಟ್ ಶಾಕ್

• ಪ್ರಜೋದಯ ವರದಿ

**ಬೆಂಗಳೂರು:** ಸುಡುವ ಬಿಸಿಲಿನ ಬೇಗೆಯಿಂದ ಈಗಾಗಲೇ ಕಂಗಾಲಾಗಿರುವ ಕರ್ನಾಟಕದ ಜನರಿಗೆ ಮತ್ತೊಂದು ದೊಡ್ಡ ಶಾಕ್ ನೀಡಿದೆ ಗ್ಯಾರಂಟಿ ಸರ್ಕಾರ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಿಸುವ ಅಧಿಕೃತ ಆದೇಶ ಹೊರಡಿಸಿದೆ.

ಈ ಹೆಚ್ಚಳವು ಟ್ರೂ ಅಪ್ ಚಾರ್ಜ್ ಎಂಬ ಹೆಸರಿನಲ್ಲಿ ಜಾರಿಗೆ ಬರಲಿದ್ದು, ಮೇ 1, 2026ರಿಂದ ಗ್ರಾಹಕರ ವಿದ್ಯುತ್ ಬಿಲ್‌ನಲ್ಲಿ ಅನ್ವಯವಾಗಲಿದೆ.ಕೆಇಆರ್‌ಸಿ ಹೊರಡಿಸಿರುವ ಆದೇಶದ ಪ್ರಕಾರ, ಈ ಏರಿಕೆಯನ್ನು 2024-25ರ ಆರ್ಥಿಕ ವರ್ಷದಲ್ಲಿ ಬೆಸ್ಕಾಂಗೆ ಉಂಟಾದ ಆದಾಯದ ಕೊರತೆ ಸರಿದೂಗಿಸುವ ಉದ್ದೇಶ ಮಾಡಲಾಗಿದೆ.

ಈ ಬೃಹತ್ ಕೊರತೆಯನ್ನು ತುಂಬಿ




ಕೊಳ್ಳಲು ಎಲ್ಲಾ ಎಸ್ಕಾಂಗಳು ದರ ಏರಿಕೆ ಪ್ರಸ್ತಾವನೆ ಸಲ್ಲಿಸಿದ್ದವು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚುವರಿ ಶುಲ್ಕ ವಿಧಿಸಲು ಅನುಮತಿ ನೀಡಿದೆ. ತಿಂಗಳಿಗೆ 200 ಯೂನಿಟ್ ಬಳಸುವ ಸಾಮಾನ್ಯ ಮನೆಯ ಬಿಲ್‌ನಲ್ಲಿ ಕನಿಷ್ಠ 112 ಹೆಚ್ಚುವರಿ ಹೊರೆ ಬೀಳಲಿದೆ. ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೂ ಈ ದರ ಏರಿಕೆ ಅನ್ವಯವಾಗುತ್ತದೆ.

ಬೃಹತ್ ಪ್ರಮಾಣದಲ್ಲಿ ವಿದ್ಯುತ್ ಬಳಸುವ ಕೈಗಾರಿಕೆಗಳಿಗೆ ಇದು ದೊಡ್ಡ ಹಣದ ಹೊರೆಯಾಗುವ ಸಾಧ್ಯತೆ ಇದೆ. ಕೆಇಆರ್‌ಸಿ ಆದೇಶದಲ್ಲಿ, ಬೆಸ್ಕಾಂ ಮತ್ತು ಇತರ ಎಸ್ಕಾಂಗಳು ಈ ವಸೂಲಾತಿಯನ್ನು ಪ್ರತ್ಯೇಕ ಲೆಕ್ಕ ಪತ್ರದಲ್ಲಿ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ಇತ್ತ, 2024-25ರಲ್ಲಿ ನಿರ್ವಹಣಾ ವೆಚ್ಚಕ್ಕಿಂತ ಹೆಚ್ಚು ಆದಾಯ ಸಂಗ್ರಹ ಮಾಡಿರುವ ಹೆಸ್ಕಾಂ (ಹುಬ್ಬಳ್ಳಿ) ತನ್ನ ಗ್ರಾಹಕರಿಗೆ 2026-27ನೇ ಸಾಲಿನಲ್ಲಿ ಪ್ರತಿ ತಿಂಗಳು ಪ್ರತಿ ಯುನಿಟ್‌ಗೆ 10 ಪೈಸೆಯಂತೆ ಮರುಪಾವತಿ ಮಾಡಬೇಕು. ಜೆಸ್ಕಾಂ (ಕಲಬುರಗಿ) ಗ್ರಾಹಕರಿಗೆ 10 ಪೈಸೆ, ಮಂಗಳೂರಿನ ಮೆಸ್ಕಾಂ ಗ್ರಾಹಕರಿಗೆ 9 ಪೈಸೆ ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸರಬರಾಜು ಸಹಕಾರ ಸೊಸೈಟಿಯ (ಹೆಚ್‌ಆರ್‌ಇಸಿಎಸ್) ಗ್ರಾಹಕರಿಗೆ ಪ್ರತಿ ಯುನಿಟ್‌ಗೆ ಬರೋಬ್ಬರಿ 155 ಪೈಸೆಯಷ್ಟು ಹಣವನ್ನು ಮರುಪಾವತಿ ಮಾಡಬೇಕು.

# ರಾಮನಾಥಪುರ ಕಾವೇರಿ ನದಿಯಲ್ಲಿ ಕುಡುಕರ ಹಾವಳಿ: ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ಕಾವೇರಿ ನದಿಯಲ್ಲಿನ ಪುಣ್ಯ ಸ್ಥಳಗಳಲ್ಲಿ ಕೆಲವು ಪುಂಡರ ಗುಂಪು ಮದ್ಯಪಾನ ಸೇವನೆ ಮಾಡುವುದಲ್ಲದೇ ನೀರಿನಲ್ಲಿ ಸ್ನಾನ ಮಾಡುವ ಮಹಿಳೆಯರು ಸೇರಿದಂತೆ ಇತರರಿಗೆ ತೊಂದರೆ ಉಂಟುಮಾಡುತ್ತಿರುವ ಭಯದ ವಾತಾವರಣ ಸೃಷ್ಟಿಸುತ್ತಿರುವುದು ಕಂಡು ಬಂದಿದೆ.

ಶ್ರೀ ರಾಮೇಶ್ವರ ದೇವಸ್ಥಾನ, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ, ಪ್ರಸನ್ನ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಶ್ರೀ ಪಟ್ಟಾಭಿರಾಮ ದೇವಸ್ಥಾನ,ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಶ್ರೀ ಲಕ್ಷ್ಮಣೇಶ್ವರ ಸೇರಿದಂತೆ ಹಲವಾರು ದೇವಸ್ಥಾನಗಳು ಪುಣ್ಯ ಕಾವೇರಿ ನದಿ ದಡದಲ್ಲಿ ಇದ್ದು, ನೂರಾರು ಭಕ್ತರು ನಿತ್ಯವೂ ಕಾವೇರಿ



ಯಲ್ಲಿ ಪುಣ್ಯಸ್ನಾನ ಮಾಡಿ ದೇವರ ದರ್ಶನ ಪಡೆಯುತ್ತಾರೆ. ಪ್ರಮುಖವಾಗಿ ಕಾವೇರಿ ನದಿಯಲ್ಲಿನ ಪುರಾಣ ಪ್ರಸಿದ್ಧ ವಹ್ನಿ ಪುಷ್ಕರಣಿ ಸ್ಥಳ ಹೊರತುಪಡಿಸಿದರೇ ಉಳಿದಲ್ಲ ಗೋಗರ್ಭ, ಗಾಯಿತ್ರಿಶಿಲೆ, ಕುಮಾರಧಾರಾ ತೀರ್ಥ ಸ್ಥಳಗಳು ಕಾವೇರಿ ನದಿಯ ಮಧ್ಯಭಾಗದಲ್ಲಿ ಇವೆ. ಮೊದಲು ಈ ಸ್ಥಳಗಳಿಗೆ ಭಕ್ತರು ತೆರಳಿ ಪೂಜೆ ಸಲ್ಲಿಸುವ ಮೊದಲು ನದಿಯಲ್ಲಿ ಪುಣ್ಯ ಸ್ನಾನ ಮಾಡುವುದು ಪ್ರತೀತಿಯಾಗಿದೆ.

**ಪುಂಡರ ಹಾವಳಿ:** ಬೇಸಿಗೆಯ ಬಿಸಿಲಿನ ತಾಪಮಾನ ಭಕ್ತರಿಗೆ ದೊಡ್ಡಮಟ್ಟದಲ್ಲಿ ಉಂಟಾಗಿರುವ ಪರಿಣಾಮ ಹೆಚ್ಚು ಕಾಲ ನೀರಿನಲ್ಲಿ ಕಳೆಯುತ್ತಾರೆ.ಹೆಚ್ಚಿನ ಪ್ರಮಾಣದಲ್ಲಿ ಕುಟುಂಬದೊಂದಿಗೆ ಆಗಮಿಸುವ ಮಕ್ಕಳು, ಹೆಣ್ಣುಮಕ್ಕಳು ಕಂಡು ಬರುತ್ತಾರೆ. ಕೆಲವರು ಗೆಳತಿ, ಗೆಳೆಯರೊಂದಿಗೆ ಬರುವವರ ಸಂಖ್ಯೆಯೇ ಅಧಿಕ. ಇಂತಹ ಸಂದರ್ಭವನ್ನು ದುರ್ಬಳಕೆ ಮಾಡುವ ಸಲುವಾಗಿ ಕೆಲವು ಪುಂಡರ ಗುಂಪು ಸ್ನಾನ ಮಾಡುವ ನೆಪದಲ್ಲಿ ಮದ್ಯಪಾನಗಳನ್ನು ಜತೆಯಲ್ಲಿಯೇ ತಂದು ಯಾವುದೇ ಭಯವಿಲ್ಲದೇ ಜನರು ಸ್ನಾನ ಮಾಡುವ ಜಾಗದಲ್ಲಿ ಸೇವನೆ ಮಾಡಿ ಕಿರಿ ಕಿರಿ ಉಂಟು ಮಾಡುವುದಲ್ಲದೇ ಇತರೆ ಅಹಿತಕರ ಕೃತ್ಯಕ್ಕೆ ಮುಂದಾಗುತ್ತಾರೆ. ಈ ಬಗ್ಗೆ ಪ್ರಶ್ನೆ ಮಾಡಿದರೇ ಗಲಾಟೆ, ಘರ್ಷಣೆಗೂ ಮುಂದಾಗುತ್ತಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

**ರಕ್ಷಣಾ ಕ್ರಮ ಕೈಗೊಳ್ಳದ ಆಡಳಿತ:** ದಕ್ಷಿಣ ಕಾಶೀ ಎಂದೇ ಕರೆಯುವ ರಾಮನಾಥಪುರದ ಕಾವೇರಿ ನದಿ ದಂಡೆಯಲ್ಲಿ ಹತ್ತಾರು ಪುರಾತನ, ಪುರಾಣ ಪ್ರಸಿದ್ಧ ದೇವಾಲಯಗಳು ಇವೆ. ಇಡೀ ವರ್ಷ ಪೂರ್ತಿ ರಥೋತ್ಸವ, ಉತ್ಸವ, ವಿಶೇಷ ಪೂಜಾ ಕಾರ್ಯಗಳು ಜರುಗುತ್ತವೆ. ಜಿಲ್ಲೆಯಲ್ಲಿಯೇ ರಾಮನಾಥಪುರ ಅತ್ಯಂತ ಪುಣ್ಯ ಸ್ಥಳವಾಗಿದೆ. ನದಿಯಲ್ಲಿ ನಿತ್ಯವೂ ನೂರಾರು ಮಂದಿ ಸ್ನಾನ ಮಾಡುತ್ತಾರೆ. ಹೆಣ್ಣು ಮಕ್ಕಳು ಕೂಡ ಸೇರಿದ್ದಾರೆ. ಮಹಿಳೆಯರು ಸ್ನಾನ ಮಾಡಿ ಬಟೆ ಬದಲಿಸುವ ಕೇಂದ್ರಗಳನ್ನು ನಿರ್ಮಿಸಿಲ್ಲ. ದೇವರ ಪವಿತ್ರ ಸ್ಥಳವೆಂಬ ಕಾರಣಕ್ಕೆ ಎಲ್ಲವನ್ನು ಸಹ ಸಹಿಸಿಕೊಂಡಿದ್ದಾರೆ. ತಾಲೂಕು ಆಡಳಿತ, ಸ್ಥಳೀಯ ಗ್ರಾಪಂ ಆಡಳಿತ, ದೇವಾಲಯ ಆಡಳಿತ ಮಂಡಳಿ ನದಿಯಲ್ಲಿ ಸ್ನಾನ ಮಾಡುವ ಮಹಿಳಾ ಭಕ್ತರಿಗೆ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕಿದೆ. ಹಾಗೂ ಅವಶ್ಯ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಸ್ಥಳೀಯರ ಆಗ್ರಹವಾಗಿದೆ.

# ಜನಗಣತಿ ಯಶಸ್ವಿಗೆ ಸೂಚನೆ

## ಪ್ರತಿದಿನ 1 ಗಂಟೆ ಮೀಸಲಿಟ್ಟು ಪರಿಶೀಲನೆ ನಡೆಸಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಜನಗಣತಿಯನ್ನು ಯಶಸ್ವಿಗೊಳಿಸಲು ಅಧಿಕಾರಿಗಳು ಗಮನಹರಿಸಿ ಜಿಲ್ಲೆಯನ್ನು ಉತ್ತಮ ಸ್ಥಾನದಲ್ಲಿ ಇರುವಂತೆ ನೋಡಿಕೊಳ್ಳಲು ಪ್ರತಿದಿನ ಒಂದು ಗಂಟೆ ಮೀಸಲಿಟ್ಟು ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಎಂದು ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಸಭೆ ನಡೆಸಿ ಮಾತನಾಡಿದ ಅವರು, ಸ್ವಯಂ ಗಣತಿಗೆ ಈಗಲೂ ಅವಕಾಶವಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಆಹ್ವಾನಿಸಿ ಸ್ವಯಂ ಗಣತಿಗೆ ಚಾಲನೆ ನೀಡಿಸಿ ಎಂದರಲ್ಲದೆ, ಎಸ್.ಹೆಚ್.ಜಿ. ಸದಸ್ಯರುಗಳನ್ನು ಸ್ವಯಂ ಗಣತಿ ಮಾಡಿಸಿ ಜೊತೆಗೆ ಪಶು ಸಖಿ ಮೂಲಕ ಕೂಡ ಸ್ವಯಂ ಗಣತಿಗೆ ಒತ್ತು ನೀಡುವಂತೆ ಸೂಚಿಸಿದರು.

ಇದುವರೆಗೂ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳದೆ ಇರುವ ಮೇಲ್ವಿಚಾರಕರು ಹಾಗೂ ಗಣತಿದಾರರು ಇಂದೆ ಆ್ಯಪ್ ಡೌನ್ ಲೋಡ್ ಮಾಡಿಕೊಂಡು ಲಾಗಿನ್ ಆಗಬೇಕು ಈ ನಿಟ್ಟಿನಲ್ಲಿ ಅಧಿಕಾರಿಗಳು ಗಮನಹರಿಸಿ ಎಂದು ತಿಳಿಸಿದರು.

ನಿಗಧಿತ ಸಮಯಕ್ಕೆ ಪೂರ್ಣಗೊಳಿಸಲು ತಹಸೀಲ್ದಾರ್ ಕ್ರಮ ಕೈಗೊಳ್ಳುವಂತೆ ಸೂಚಿಸಿದರಲ್ಲದೆ, ನಗರ ಸ್ಥಳೀಯ ಸಂಸ್ಥೆಗಳ ಎಸ್.ಹೆಚ್.ಜಿ. ಗುಂಪುಗಳ ಸದಸ್ಯರುಗಳ ಸ್ವಯಂ ಗಣತಿ ಮಾಡಿಸಲು ಕ್ರಮ ಕೈಗೊಳ್ಳುವಂತೆಯೂ ಸಹ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

# ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಯೋಗಾಸನ ಅತಿಮುಖ್ಯ

## ಬೇಸಿಗೆ ಶಿಬಿರದಲ್ಲಿ ಸಾಹಿತಿ, ಯೋಗ ಶಿಕ್ಷಕಿ ಗಿರಿಜಾ ನಿರ್ವಾಣಿ

• ಪ್ರಜೋದಯ ವರದಿ

**ಹಾಸನ:** ಯೋಗದ ನಿಜವಾದ ಲಾಭವನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಬೇಕಿದೆ. ಆಗ ಮಾತ್ರ ಸಾಮುದಾಯಿಕ ಪ್ರಗತಿ ಸಾಧ್ಯ ಎಂದು ಸಾಹಿತಿ ಹಾಗೂ ಯೋಗ ಶಿಕ್ಷಕಿ ಗಿರಿಜಾ ನಿರ್ವಾಣಿ ಅವರು ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ (ರಿ.), ಬೆಂಗಳೂರು, ತಾಲ್ಲೂಕು ಘಟಕ ಹಾಸನ ಹಾಗೂ ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಂಸ್ಥೆ ಹಾಸನ ವತಿಯಿಂದ ಜಿಲ್ಲಾ ಸ್ಕೌಟ್ ಗೈಡ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರದಲ್ಲಿ ಯೋಗ ಆರೋಗ್ಯ ತರಗತಿ ನೀಡಿ ಮಾತನಾಡಿದ ಅವರು, ಈಗಿನ ಆಧುನಿಕ ಯುಗದಲ್ಲಿ ಯೋಗಾಸನದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದು ಅತ್ಯಗತ್ಯ. ಬೇಸಿಗೆ



ಶಿಬಿರಗಳಂತಹ ಅಗತ್ಯ ಚಟುವಟಿಕೆಗಳಲ್ಲಿ ಯೋಗವನ್ನು ಪರಿಚಯಿಸುತ್ತಿರುವ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಕಾರ್ಯ ಶ್ಲಾಘನೀಯ. ಮಕ್ಕಳಲ್ಲಿ ಸರ್ವತೋಮುಖ ಬೆಳವಣಿಗೆಗೆ ಯೋಗಾಸನ ಅತಿಮುಖ್ಯ. ಆರೋಗ್ಯದ ದೃಷ್ಟಿಯಿಂದ ತಾಂತ್ರಿಕ ಯೋಗಾಸನಗಳು ಸಹ ರೂಢಿಯಲ್ಲಿ ಬಂದಿವೆ. ಪತಾಂಜಲಿ ಯೋಗ ಸೂತ್ರದ ಮೂಲಕ ಅಷ್ಟಾಂಗ ಯೋಗದ ಪರಿಕಲ್ಪನೆಯನ್ನು ಮಾಡಿಕೊಡ ಲಾಗಿದೆ. ಯಮ, ನಿಯಮ, ಆಸನ, ಪ್ರಾಣಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ ಈ ಎಲ್ಲಾ ಆಸನಗಳ ಜೊತೆಗೆ ಆರೋಗ್ಯದ ದೃಷ್ಟಿಯಿಂದ ಇತ್ತೀಚಿನ ಯೋಗ ಗುರು ಗಳು ಹಲವಾರು ರೀತಿಯ ಯೋಗಾಸನಗಳನ್ನು ಅಳವಡಿಸಿಕೊಂಡು ಜನಸಾಮಾನ್ಯರಿಗೆ ಸಿಗುವಂತೆ ಆರೋಗ್ಯವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಅಶ್ವಿನಿ ಭೈರಾಪುರ ಮಾತನಾಡಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಲವಾರು ವರ್ಷಗಳಿಂದಲೂ ಮಕ್ಕಳ ಅಭ್ಯುದಯಕ್ಕಾಗಿ ಗುಣಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದು, ಪ್ರತಿವರ್ಷ ನಮ್ಮ ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಸ್ಥಳಾವಕಾಶ ಕಲ್ಪಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಇಂತಹ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದು ಕಲಿಸಿದ್ದಕ್ಕಿಂತ ಕಲಿತಿದ್ದೇ ಜಾಸ್ತಿ ಎಂದರು.

ವೇದಿಕೆಯಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್, ತಾಲ್ಲೂಕು ಅಧ್ಯಕ್ಷೆ ಕೆ.ಸಿ.ಗೀತಾ, ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ, ಪ್ರತಿಮಾ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷೆ ಎಚ್.ಎಸ್. ಪ್ರತಿಮಾ, ಯೋಗಶಿಕ್ಷಕಿ ಗಿರಿಜಾ ನಿರ್ವಾಣಿ, ಗೈಡ್ ಕ್ಯಾಪ್ಟನ್ ಅಶ್ವಿನಿ ಭೈರಾಪುರ, ಗೈಡ್ ಕ್ಯಾಪ್ಟನ್ ಶ್ರೀ, ಲೇಡಿ ಸ್ಕೌಟ್ ಮಾಸ್ಟರ್ ರೇಣುಕಾ ಭೈರಾಪುರ, ಜಿಲ್ಲಾ ಖಜಾಂಚಿ ಆರ್.ಎಸ್. ರಮೇಶ್ ಸೇರಿದಂತೆ 50 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಹಾಜರಿದ್ದರು.

## ನಾಳೆ ಬಸವ ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಸಹಯೋಗದಲ್ಲಿ ಏ.20 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶ್ರೀ ಬಸವ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ ದೇವೇಗೌಡ ಘನ ಉಪಸ್ಥಿತರಿರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ ರೇವಣ್ಣ, ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು ಇನ್ನಿತರರು ಉಪಸ್ಥಿತರಿರಲಿದ್ದಾರೆ.

# ವಾರದ ಸಂತೆ ಸುಂಕ ವಸೂಲಿ ಕೈಬಿಡಲು ರೈತ ಸಂಘ ಮನವಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದಲ್ಲಿ ಪುರಸಭೆ ನಡೆಸಲು ಹೊರಟಿರುವ ದಿನವಹಿ ಹಾಗೂ ವಾರದ ಸಂತೆ ಸುಂಕ ವಸೂಲಿ ಈ ಬಾರಿಯೂ ಕೈಬಿಡುವಂತೆ ರೈತ ಸಂಘ ಮನವಿ ಮಾಡಿದೆ.

ಪುರಸಭೆಯ ಮುಖ್ಯಾಧಿಕಾರಿಗೆ ಅಧ್ಯಕ್ಷ ಜವರೇಶ್ ಹಾಗೂ ಮತ್ತೊಂದು ರೈತ ಬಣದ ನರಸಿಂಹಶೆಟ್ಟಿ ಶನಿವಾರದಂದು ಮನವಿ ಪತ್ರ ನೀಡಿದರು.

ಮಾರುಕಟ್ಟೆ ವರ್ತಕರೂ ಪುರಸಭೆ ನಡೆಸಿರುವ ಸುಂಕ ವಸೂಲಿಗೆ ಹರಾಜು ಪ್ರಕ್ರಿಯೆ ವಿರೋಧಿಸಿ ಆಕ್ಷೇಪಿಸಿದ್ದಾರೆ. ಸಣ್ಣ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟಕ್ಕೆ ತರುವ ರೈತರ ಆರ್ಥಿಕತೆಗೆ ಹೊಡೆತ ಬೀಳಲಿದೆ. ಅಷ್ಟಿಷ್ಟು ಮಾರಾಟ



ಮಾಡಿದ್ದರಿಂ ಬಂದ ಹಣದಿಂದ ಔಷದ, ಅಗತ್ಯ ಪದಾರ್ಥಗಳನ್ನು ಖರೀದಿಸುತ್ತಾರೆ. ಪುರಸಭೆ ಪಟ್ಟಣದಲ್ಲಿ ಅಗತ್ಯಕ್ಕಿಂತ ಹೆಚ್ಚು ಮಳಿಗೆಗಳನ್ನು ನಿರ್ಮಿಸಿ ನಿರುಪಯುಕ್ತವಾಗಿ ಉಳಿಸಿಕೊಂಡಿದೆ. ಅವುಗಳಿಂದ ಆದಾಯ ಕಿಂಚಿತ್ ಬರುತ್ತಿಲ್ಲ. ಹಲವು ವಾಣಿಜ್ಯ ಮಳಿಗೆಗಳನ್ನು ಬಾಡಿಗೆದಾರರಿಂದ ಬಾಡಿಗೆ ವಸೂಲಿ ಮಾಡಲಾಗಿಲ್ಲ. ಆದರೆ ರೈತರ ಜೇಬಿಗೆ ದಿನ ನಿತ್ಯ 20 ರಿಂದ 40 ರೂ ವರೆಗೆ ಸುಂಕ ವಸೂಲಿ ಮಾಡಲು ಹೊರಟಿದೆ. ಇದರಿಂದ

> ಪುರಸಭೆಗೆ ಆಡಳಿತಾಧಿಕಾರಿ ನೇಮಕವಾಗಿರುವ ಕಾರಣ ಮೇಲಿನ ಅಧಿಕಾರಿಗಳು ಹೇಳಿದ್ದನ್ನು ನಾವು ಪಾಲಿಸಲೇಬೇಕಿದೆ. ರೈತ ಮುಖಂಡರು, ಮಾರುಕಟ್ಟೆ ವ್ಯಾಪಾರಸ್ಥರ ಮನವಿ ಪತ್ರ ಸ್ವೀಕರಿಸಿದ್ದೇವೆ. ಆಡಳಿತಾಧಿಕಾರಿಗಳು ನಿರ್ಣಯಿಸದಂತೆ ನಾವು ನಡೆ ಅನುಸರಿಸಬೇಕು.
> **ಶಿವಶಂಕರ್**, ಪುರಸಭೆ ಮುಖ್ಯಾಧಿಕಾರಿ, ಹೊಳೆನರಸೀಪುರ.

ಪುರಸಭೆಗೆ ಗರಿಷ್ಠ 8 ಲಕ್ಷ ರೂ. ವರ್ಷವಹಿ ಆದಾಯ ಬರುವುದೇನೋ ಸರಿ. ಕಳೆದ ವರ್ಷ ಸುಂಕ ಕೈಬಿಟ್ಟಿದ್ದರಿಂದ ಪುರಸಭೆ ನಷ್ಟದಲ್ಲಿ ಇಲ್ಲ. ಬಡ ರೈತರ ಹಿತ ಮರೆಯುವುದು ಬೇಡ ಎಂದು ರೈತರು ಇದೇ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ.

ಪಟ್ಟಣದಲ್ಲಿ ಕಳೆದ ವರ್ಷ ಮನವಿ ಮಾಡಿದ್ದರಿಂದ ಸುಂಕ ವಿನಾಯ್ತಿ ನೀಡಲಾಗಿತ್ತು. ಇದೀಗ ಪುರಸಭೆಯಲ್ಲಿ ಚುನಾಯಿತ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇಲ್ಲ, ಇದರಿಂದ ಜಿಲ್ಲಾ ಉಪವಿಭಾಗಾಧಿಕಾರಿಯನ್ನು ಪಟ್ಟಣದ ಪುರಸಭೆಗೆ ಆಡಳಿತ ಅಧಿಕಾರಿಯಾಗಿ ನೇಮಕಗೊಳಿಸಲಾಗಿದೆ. ಪ್ರಸ್ತುತ ಮುಂದಿನ ಆರ್ಥಿಕ ಸಾಲಿಗೆ ನಿಯಮ ಅನುಸರಿಸಿ ಸುಂಕ ಹರಾಜು ನಡೆಸಲು ನಿಗಧಿಸಲಾಗಿದೆ.

ಪುರಸಭಾ ಮಾಜಿ ಸದಸ್ಯ ಸ್ವಾಮಿ, ಮಾರುಕಟ್ಟೆ ವ್ಯಾಪಾರಸ್ಥರ ಮುಖಂಡ ಶಿವು, ರೈತ ಮುಖಂಡ ಪುಟ್ಟಸ್ವಾಮಿ ಮತ್ತಿತರರು ಹಾಜರಿದ್ದರು.

# ಏ.23 ರಿಂದ ಕಾಲುಬಾಯಿ ರೋಗಕ್ಕೆ ಲಸಿಕೆ

• ಪ್ರಜೋದಯ ವರದಿ

**ಹಾಸನ:** ಭಾರತ ಸರ್ಕಾರದ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಏ.23 ರಿಂದ ಮೇ 22ರ ವರೆಗೆ ಹಾಸನ ಜಿಲ್ಲೆಯಾದ್ಯಂತ 9ನೇ ಸುತ್ತಿನ ಕಾಲುಬಾಯಿ ರೋಗದ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾಲು ಬಾಯಿ ರೋಗವು ದನ, ಎಮ್ಮೆ ಹಂದಿ, ಕುರಿ, ಮೇಕೆ ಮತ್ತು ವನ್ಯಜೀವಿಗಳಲ್ಲಿ ಜ್ವರ ಹಾಗೂ ಕಾಲು ಮತ್ತು ಬಾಯಿಗಳಲ್ಲಿ ಉಣ್ಣು ಕಂಡು ಬರುತ್ತದೆ ರೋಗಗಸ್ತ ಜಾನುವಾರುಗಳಲ್ಲಿ ಉತ್ಪಾದಕತೆ ಕುಂಠಿತಗೊಂಡು ರೈತಾಪಿ ವರ್ಗಕ್ಕೆ, ಇದರಿಂದ ಸಾಕಷ್ಟು ಆರ್ಥಿಕ ನಷ್ಟ ಉಂಟಾಗುತ್ತದೆ.

ಜಿಲ್ಲೆಯ ಎಲ್ಲಾ ರೈತ ಬಾಂಧವರು ಹಾಗೂ ಸಾರ್ವಜನಿಕರು ತಮ್ಮ



ಜಾನುವಾರುಗಳಿಗೆ ಅಂದರೆ ಎಲ್ಲಾ ದನ ಮತ್ತು ಎಮ್ಮೆಗಳಿಗೆ ಹಾಗೂ 4 ತಿಂಗಳ ಮೇಲ್ಪಟ್ಟ ಎಲ್ಲಾ ಕರುಗಳಿಗೆ ತಮ್ಮದೇ ಕಾಲು ಬಾಯಿ ರೋಗದ ಲಸಿಕೆಯನ್ನು ಹಾಕಿಸುವ ಮೂಲಕ ತಮ್ಮ ಜಾನುವಾರುಗಳನ್ನು ಕಾಲು ಬಾಯಿ ರೋಗದಿಂದ ಸಂರಕ್ಷಿಸಿಕೊಂಡು ಈ ರೋಗದಿಂದ ಉಂಟಾಗಬಹುದಾದ ಆರ್ಥಿಕ ನಷ್ಟದಿಂದ ಪಾರಾಗಲು ಸಹಕರಿಸುವಂತೆ ಜಾನುವಾರು ಮಾಲೀಕರಲ್ಲಿ, ರೈತರಲ್ಲಿ ಕೋರಿದೆ.

ಸದರಿ ಲಸಿಕಾ ಕಾರ್ಯಕ್ರಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಸಿಬ್ಬಂದಿ ವರ್ಗದವರು ಗ್ರಾಮಗಳಿಗೆ ಭೇಟಿ ನೀಡಿ ಉಚಿತವಾಗಿ ಜಾನುವಾರುಗಳಿಗೆ ಕಾಲುಬಾಯಿ ರೋಗದ ಲಸಿಕೆ ನೀಡಲಿದ್ದಾರೆ. ಸದರಿ ಲಸಿಕಾ ಕಾರ್ಯಕ್ರಮದಲ್ಲಿ ಲಸಿಕೆ ಹಾಕಿದೆ ಜಾನುವಾರುಗಳ ವಿವರಗಳೊಂದಿಗೆ ಲಸಿಕಾ ಪ್ರಗತಿಯನ್ನು ಆಲ್‌ನೈಲ್‌ನಲ್ಲಿ ಭಾರತ್ ಪಶುಧನ್ ತಂತ್ರಾಂಶದಲ್ಲಿ ದಾಖಲು ಮಾಡಲಾಗುತ್ತದೆ ಹಾಗೂ ಜಿಲ್ಲೆಯ ಲಸಿಕಾ ಪ್ರಗತಿಯನ್ನು ಭಾರತ್ ಪಶುಧನ್ ಪೋರ್ಟಲ್ ನಲ್ಲಿ ವೀಕ್ಷಿಸಬಹುದಾಗಿರುತ್ತದೆ ಎಂದು ಪಶುಪಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಮುಸ್ಲಿಂ ಸಮುದಾಯ ಕಡೆಗಣನೆ ಆರೋಪ

## ರಾಜ್ಯ ಕಾಂಗ್ರೆಸ್ ಪಕ್ಷದ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ಸಕಲೇಶಪುರ:** ರಾಜ್ಯದಲ್ಲಿ ಕಾಂಗ್ರೆಸ್ ಮುಸ್ಲಿಂ ಸಮುದಾಯದ ವಿರುದ್ಧ ಅನುಸರಿಸುತ್ತಿರುವ ನೀತಿಗಳು ಆತಂಕಕ್ಕೆ ಕಾರಣವಾಗಿದ್ದು, ಕೆಲವೇ ವ್ಯಕ್ತಿಗಳ ರಾಜಕೀಯ ಲಾಭಕ್ಕಾಗಿ ಸಮುದಾಯವನ್ನೇ ಕಡೆಗಣಿಸುವ ಮನೋಭಾವ ಎದ್ದು ಕಾಣುತ್ತಿದೆ ಎಂದು ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟದ ಮುಖಂಡ ಫೈರೋಜ್ ಪಾಷ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಮುಸ್ಲಿಂ ನಾಯಕರ ಮಧ್ಯೆ ಭಿನ್ನಾಭಿ ಪ್ರಾಯ ಸೃಷ್ಟಿಸಿ ರಾಜಕೀಯ ಲಾಭ ಪಡೆಯುವ ಪ್ರಯತ್ನ ನಡೆಯುತ್ತಿದೆಂಬ ಭಾವನೆ ಸಮು ದಾಯದೊಳಗೆ ಮೂಡಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಮುಸ್ಲಿಂ ಅಭ್ಯರ್ಥಿಗೆ ಬಿ ಫಾರಂ ಕೊಡಲಿಲ್ಲವೆಂದು ಸಮುದಾಯದವರು ಅಸಮಾಧಾನ ವ್ಯಕ್ತಪಡಿಸಿರುವುದು ನಿಜ.



ಆದರೂ ಯಾರೂ ಕೂಡ ಪಕ್ಷ ವಿರೋಧಿ ಕಾರ್ಯ ಮಾಡಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರಿಗೆ ಬೆಂಬಲ ನೀಡಿದ್ದೇವೆ. ಆದರೆ ಇತ್ತೀಚಿನ ಬೆಳ ವಣಿಗೆಗಳು ಅನಾರೋಗ್ಯಕರವಾಗಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ ಪಕ್ಷದ ಇಂತಹ ವರ್ತನೆಯಿಂದಾಗಿ ಮುಸ್ಲಿಂ ಸಮುದಾಯದೊಳಗೆ ಅಸಮಾಧಾನ ಸ್ಫೋಟಗೊಳ್ಳುತ್ತಿದ್ದು, ಇದು ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಗಂಭೀರ ರಾಜಕೀಯ ಹಿನ್ನಡೆ ತರುವುದು ನಿಶ್ಚಿತವಾಗಿದೆ. ದೇಶಾದ್ಯಂತ ಕಾಂಗ್ರೆಸ್ ಅನುಭವಿಸುತ್ತಿರುವ ಸ್ಥಿತಿಯೇ ಕರ್ನಾಟಕದಲ್ಲೂ ಎದುರಾಗುವ ಸಾಧ್ಯತೆಗಳಿದ್ದು, ಸಮು ದಾಯವು ತನ್ನ ಆತ್ಮಗೌರವ ಮತ್ತು ಹಕ್ಕುಗಳನ್ನು ಕಾಪಾಡಿಕೊಳ್ಳಲು ಕಾಂಗ್ರೆಸ್ ವಿರುದ್ಧ ಬಹಿಷ್ಕಾರದಂತಹ ಕಠಿಣ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ನಿರ್ಮಾಣವಾಗುತ್ತಿದೆ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ತಪ್ಪುಗಳನ್ನು ಸರಿಪಡಿಸಿಕೊಳ್ಳದಿದ್ದರೆ, ಮುಸ್ಲಿಂ ಸಮುದಾಯದ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಳ್ಳಬೇಕಾಗುತ್ತದೆಂದು ಅವರು ಎಚ್ಚರಿಸಿದರು.

ಜಿಲ್ಲೆಯಲ್ಲೂ ಕಾಂಗ್ರೆಸ್ ಮುಖಂಡರು ಈ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕಿದ್ದು, ಅಗತ್ಯವಿದ್ದಲ್ಲಿ ಸಾಮೂಹಿಕ ರಾಜೀನಾಮೆಯಂತಹ ಸಂಘಟಿತ ಹೋರಾಟದ ಮೂಲಕ ತಮ್ಮ ವಿರೋಧ ವ್ಯಕ್ತಪಡಿಸಬೇಕು. ಕಾಂಗ್ರೆಸ್ ಪಕ್ಷವು ತಕ್ಷಣವೇ ತನ್ನ ನೀತಿಗಳನ್ನು ಮರುಪರಿಶೀಲಿಸಿ, ಸಮುದಾಯಗಳ ನಡುವೆ ಭಿನ್ನತೆ ಸೃಷ್ಟಿಸುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ್ದಾರೆ.

# ಜಿಲ್ಲಾ ಮಟ್ಟದ ನೌಕರರ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘ ಇವರ ಸಹಯೋಗದಲ್ಲಿ ಏ.21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾ ಮಟ್ಟದ ನೌಕರರ ದಿನಾಚರಣೆ ಮತ್ತು ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರಾದ ಹೆಚ್.ಡಿ ರೇವಣ್ಣ, ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ ಇತರರಿರುವರು.

## ಭಕ್ತರನ್ನು ವಂಚಿಸಬಹುದು, ಗಂಗಾ ಮಾಳಿಕ ದೇವಿಯನ್ನು ವಂಚಿಸಲು ಸಾಧ್ಯವಿಲ್ಲ

# ಎನ್.ಆರ್.ಸಂತೋಷ್‌ರಿಂದ ದೇವಾಲಯದ ಹಣ ದುರುಪಯೋಗ

• ಪ್ರಜೋದಯ ವರದಿ

**ಅರಸೀಕೆರೆ:** ಭಕ್ತರನ್ನು ವಂಚಿಸಬಹುದು, ಆದರೆ ಶಕ್ತಿ ದೇವತೆಯಾಗಿರುವ ಗಂಗಾ ಮಾಳಿಕ ದೇವಿಯನ್ನು ವಂಚಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ದೇವಾಲಯದ ಅರ್ಚಕ ಅಮ್ಮನ ಹಟ್ಟಿ ಹರೀಶ್ ಅವರು ಎನ್.ಆರ್.ಸಂತೋಷ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮ್ಮನವರಿಗೆ ಒಡವೆ ಮಾಡಿಸುವುದಾಗಿ ದೇವಾಲಯದ ಕೋಟ್ಯಾಂತರ ರೂಪಾಯಿಯನ್ನು ತಮ್ಮ ಮನೆಗೆ ಕೊಂಡೊಯ್ದಿದ್ದ ಸಂತೋಷ್ ಅವರು ಚಿನ್ನವನ್ನು ತರದೆ ದುಡ್ಡನ್ನು ವಾಪಸ್ ಕೊಡದೆ ದಿನಗಳನ್ನು ದೂಡುತ್ತ ಬಂದಿದ್ದರಿಂದ ಸಹಜವಾಗಿಯೇ ದೇವಿಯ ಭಕ್ತವೃಂದ ಹಾಗೂ ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿತ್ತು. ಆ ಸಂದರ್ಭದಲ್ಲಿ ನಮ್ಮ ಸಂಪರ್ಕಕ್ಕೆ ಸಂತೋಷ್ ಅವರು ಸಿಗದಿದ್ದಾಗ ಸಾಮಾಜಿಕ ಜಾಲತಾಣದ



ಮೂಲಕ ವಿಡಿಯೋ ಮಾಡಿ ದೇವಾಲಯಕ್ಕೆ ಸೇರಿದ ಹಣವನ್ನು ವಾಪಸ್ ನೀಡುವಂತೆ ಕೇಳಿಕೊಂಡಾಗ ಎಚ್ಚೆತ್ತಾ ಸಂತೋಷ್ ಮತ್ತು ಅವರ ಬೆಂಬಲಿಗರು ಮಾರನೇ ದಿನ ತರಾತುರಿಯಲ್ಲಿ ಚಿನ್ನದ ಗಟ್ಟಿಯನ್ನು ತಂದು ತೋರಿಸಿದರೆ ವಿನಹ, ಅದಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ನೀಡದೆ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿ ದ್ದಾರೆ ಎಂದು ದೂರಿದರು.

ಅಮ್ಮನವರಿಗೆ ಸೇರಿದ ಕೋಟ್ಯಂತರ ರೂಪಾಯಿ ಹಣದಲ್ಲಿ ಒಂದೇ ಒಂದು ರೂಪಾಯಿಯೂ ಸಹ ದುರುಪಯೋಗವಾಗಬಾರದು ಎಂಬುದು ಭಕ್ತರ ಹಾಗೂ ಗ್ರಾಮಸ್ಥರ ಕಳಕಳಿಯಾಗಿತ್ತು. ಆದರೆ ಸಂತೋಷ್ ಮತ್ತು ಅವರ ಕಡೆಯವರು ಖರೀದಿಸಿರುವ ಚಿನ್ನಕ್ಕೆ ಸೂಕ್ತ ದಾಖಲೆಗಳಿಲ್ಲ, ಕೋಟ್ಯಂತರ ರೂಪಾಯಿ ವ್ಯವಹಾರ ಬ್ಯಾಂಕ್ ಮೂಲಕವೇ ಆಗಬೇಕು ಇದು ಸಹ ಮಾಡಿಲ್ಲ ಕೇವಲ ಒಂದು ಬಾರಿ ಮಾತ್ರ 8 ಲಕ್ಷ ರೂಪಾಯಿಯನ್ನು ಖಾಸಗಿ ಬ್ಯಾಂಕ್‌ನ ಖಾತೆಗೆ ಜಮೆ ಮಾಡಿ ಅಂದೆ. ಅವರ ಬೆಂಬಲಿಗನೊಬ್ಬ ನಾಲ್ಕು ಲಕ್ಷ ರೂ.ಗಳನ್ನು ಡ್ರಾ ಮಾಡಿಕೊಂಡಿದ್ದಾರೆ. ಇನ್ನು ಉಳಿದ 4 ಲಕ್ಷ ರೂ.ಗಳು ಸಹ ಇದೇ ರೀತಿ ಒಬ್ಬರು ಡ್ರಾ ಮಾಡಿಕೊಂಡಿದ್ದು ಇದಕ್ಕೆ ಯಾವುದೇ ಲೆಕ್ಕ ಇಲ್ಲ, ಇದನ್ನು ನೋಡಿದರೆ ದೇವಾಲಯಕ್ಕೆ ಸೇರಿದ ಹಣ ದುರುಪಯೋಗವಾಗಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಜಿಎಸ್‌ಟಿ ಕಟ್ಟಿ ಚಿನ್ನ ಖರೀದಿಸುವುದಾಗಿ ಸಂತೋಷ್ ಅವರು ದೇವಾಲಯದ ಮುಂದೆ ನಿಂತು ಹೇಳಿಕೆ ನೀಡುವ ಮೂಲಕ ಗ್ರಾಮಸ್ಥರನ್ನು ನಂಬಿಸುವ ಕೆಲಸ ಮಾಡಿದ್ದಾರೆ. ಆದರೆ ಇವರು ಜಿಎಸ್‌ಟಿ ಸಂಖ್ಯೆ ಎಂದು ತೋರಿಸಿರುವುದು ಜಿಎಸ್‌ಟಿ ಸಂಖ್ಯೆಯಲ್ಲ, ಅದು ಯೂನಿಕ್ ಸಂಖ್ಯೆ ಮಾತ್ರ, ಇವರು ಚಿನ್ನ ಖರೀದಿಸಿದ ದಿನ ಇದ್ದ ಚಿನ್ನದ ಬೆಲೆಗೂ ಇವರು ನೀಡುತ್ತಿರುವ ಲೆಕ್ಕಕ್ಕೂ ವ್ಯತ್ಯಾಸವಿದ್ದು ಸುಮಾರು ಎರಡುವರೆ ಲಕ್ಷಕ್ಕೂ ಹೆಚ್ಚು ಹಣ ಲಪಟಾಯಿಸಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಗ್ರಾಮಸ್ಥರ ನಡುವೆ ಭಿನ್ನಾಭಿಪ್ರಾಯ ಮೂಡಿಸಿ ಗ್ರಾಮದ ಅಶಾಂತಿಗೆ ಕಾರಣರಾಗಿದ್ದಾರೆ ಎಂದಿದ್ದಾರೆ.

# ಜೆಜೆಎಂ ಕಾಮಗಾರಿಗಳಿಗೆ ಅನುದಾನದ ಕೊರತೆ

## ಕೇಂದ್ರದಿಂದ 640.43 ಕೋ.ರೂ.ಬಾಕಿ | ಮಂಜೂರಾದ 1,044 ಕೋಟಿಯಲ್ಲಿ 404 ಕೋ.ರೂ. ಮಾತ್ರ ಬಿಡುಗಡೆ

ಹಾಸನ: ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಉದ್ದೇಶ ದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿದ ಜಲ್ ಜೀವನ ಮಿಷನ್ (ಜೆಜೆಎಂ) ಕಾಮಗಾರಿಗಳು ಅನುದಾನ ಕೊರತೆಯಿಂದ ತೀವ್ರ ಅಡಚಣೆಗೆ ಒಳಗಾಗಿವೆ.

ಕೇಂದ್ರ ಸರ್ಕಾರದಿಂದ ಜಿಲ್ಲೆಗೆ ಒಟ್ಟು 1,044.91 ಕೋಟಿರೂ. ಮಂಜೂರಾಗಿದ್ದರೂ, ಇದುವರೆಗೆ ಕೇವಲ 404.48 ಕೋಟಿರೂ. ಮಾತ್ರ ಬಿಡುಗಡೆಯಾಗಿದೆ. ಇನ್ನೂ 640.43 ಕೋಟಿ ರೂ. ಬಿಡುಗಡೆಗೆ ಬಾಕಿ ಇರುವುದು ಕಾಮಗಾರಿಗಳ ಪ್ರಗತಿಗೆ ದೊಡ್ಡ ತಡೆ ಆಗಿದೆ. ಈಗಾಗಲೇ ಕೈಗೊಂಡಿರುವ ಪೈಪ್‌ಲೈನ್ ಅಳವಡಿಕೆ, ನೀರಿನ ಟ್ಯಾಂಕ್ ನಿರ್ಮಾಣ ಹಾಗೂ ಮನೆಮನೆಗೆ ನೀರಿನ ಸಂಪರ್ಕ ಕಲ್ಪಿಸುವ ಕಾರ್ಯಗಳು ನಿಧಾನಗತಿಯಲ್ಲಿ ಸಾಗುತ್ತಿವೆ.

ಪ್ರಸ್ತುತ ಬಾಕಿ ಬಿಲ್‌ಗಳನ್ನು ತೆರವುಗೊಳಿಸಲು ತಕ್ಷಣ 159.06 ಕೋಟಿ ರೂ. ಅಗತ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಅನುದಾನ ಬಿಡುಗಡೆ ವಿಳಂಬವಾಗುತ್ತಿರುವುದರಿಂದ ಗುತ್ತಿಗೆದಾರರು ಹಾಗು ಕಾಮಗಾರಿಗಳ ನಿರ್ವಹಣೆಯಲ್ಲಿ ತೊಡಗಿರುವ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಅದರಿಂದ ಹಲವೆಡೆ ಕಾಮಗಾರಿಗಳು ನಿಂತುಹೋಗುವ ಸ್ಥಿತಿ ನಿರ್ಮಾಣ ವಾಗಿದೆ.

ಜಿಲ್ಲೆಯಲ್ಲಿ 2020-21ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 2,200 ಕೋಟಿ ರೂ. ಹಣ ಬಿಡುಗಡೆಯಾಗಿದೆ. ಕೇಂದ್ರ ಸರ್ಕಾರದಿಂದ



ಇನ್ನೂ 640.43 ಕೋಟಿ ರೂ. ಬರಬೇಕಿದೆ. ಇದವರೆಗೂ ಜಿಲ್ಲೆಯಲ್ಲಿ ಒಟ್ಟು 2,834 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅವುಗಳಲ್ಲಿ 1,310 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಈಡೇರದ ಯೋಜನೆಯ ಉದ್ದೇಶ**

ಪ್ರತಿ ಗ್ರಾಮೀಣ ಮನೆಯಿಗೂ ನಳದ ಮೂಲಕ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಜಲ್ ಜೀವನ ಮಿಷನ್ ಯೋಜನೆ ಜಾರಿಗೊಳಿಸಿ, 2024ರೊಳಗೆ ದೇಶದ ಎಲ್ಲಾ ಗ್ರಾಮೀಣ ಮನೆಗೆ ಮನೆಗೆ ನೀರು ಸರಬರಾಜು ಮಾಡುವ ಗುರಿ ಸಾಧಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿತ್ತು. ಅನುದಾನ ಕೊರತೆ ಮತ್ತು ತಾಂತ್ರಿಕ ಅಡಚಣೆಗಳಿಂದಾಗಿ ಈ ಗುರಿ ಹಲವು ಜಿಲ್ಲೆಗಳಲ್ಲಿ ಇನ್ನೂ ಸಾಧನೆಯಾಗಿಲ್ಲ.

| ಬ್ಯಾಚ್ | ಕಾಮಗಾರಿ | ಕೇಂದ್ರ ಅನುದಾನ (ಲ.ರೂ.) | ಬಿಡುಗಡೆ (ಲ.ರೂ.) | ಬಾಕಿ |
| --- | --- | --- | --- | --- |
| ಬ್ಯಾಚ್ 1 | 462 | 19909.89 | 12743.23 | 7166.66 |
| ಬ್ಯಾಚ್ 2 | 377 | 12198.11 | 7617.27 | 4580.84 |
| ಬ್ಯಾಚ್ 3 | 117 | 3690.89 | 2768.82 | 5502.91 |
| ಬ್ಯಾಚ್ 4 | 1881 | 68692.28 | 17318.83 | 51373.45 |
| ಒಟ್ಟು | 2837 | 104491.17 | 40448.15 | 64043.02 |

ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇನ್ನೂ ತೀವ್ರವಾಗಿದೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗುತ್ತದೆ. ಈ ಹಿನ್ನಲೆ ಜಲ್ ಜೀವನ ಮಿಷನ್ ಕಾಮಗಾರಿಗಳು ಸಮಯಕ್ಕೆ ಪೂರ್ಣಗೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಕಾಮಗಾರಿಗಳನ್ನು ಪೂರ್ಣಗೊಳಿಸಲು ಬಾಕಿ ಇರುವ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವುದು ಅವಶ್ಯಕವಾಗಿದೆ. ಕೇಂದ್ರ ಸರ್ಕಾರ ತ್ವರಿತ ಕ್ರಮ ಕೈಗೊಂಡು ತನ್ನ ಪಾಲಿನ ಅನು ದಾನ ಬಿಡುಗಡೆ ಮಾಡಿದಲ್ಲಿ ಜಿಲ್ಲೆಯ ಲಕ್ಷಾಂತರ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಕನಸು ನನಸಾಗಲಿದೆ. ಇಲ್ಲವಾದಲ್ಲಿ ಕಾಮಗಾರಿಗಳು ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇರು ವುದರಿಂದ ಗ್ರಾಮೀಣ ಜನರಲ್ಲಿ ಆತಂಕ ಹೆಚ್ಚಾಗಿದೆ.

**ಅನುದಾನ ಬಿಡುಗಡೆಗೆ ಸಂಸದ ಮನವಿ**

ಜಿಲ್ಲೆಯ ಗ್ರಾಮೀಣ ಜನರಿಗೆ ಕುಡಿಯುವ



ನೀರಿನ ಸೌಲಭ್ಯ ಒದಗಿಸುವ ಜಲ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ಬಾಕಿ ಬಿಲ್ ಪಾವತಿಸುವಂತೆ ಕೋರಿ ಕೇಂದ್ರ ಜಲ ಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಮನವಿ ಸಲ್ಲಿಸಿದ್ದಾರೆ. 640.43 ಕೋಟಿ ರೂ. ಅನುದಾನ ಬಾಕಿಯಿಂದಾಗಿ ನಡೆಯುತ್ತಿರುವ ಕಾಮಗಾರಿಗಳಿಗೆ ತೀವ್ರ ಅಡಚಣೆ ಉಂಟಾಗಿದೆ. ಈ ಹಿನ್ನಲೆ ಬಾಕಿ ಇರುವ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ.

# ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದ ಸಂಸದ

• ಪ್ರಜೋದಯ ವರದಿ

**ಹಾಸನ:** ನವದೆಹಲಿ ಪ್ರವಾಸದಲ್ಲಿರುವ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗು ಕೃಷಿ ಸಚಿವ ಶಿವರಾಜ್ ಸಿಂಗ್ ಚಹ್ವಾಣ್ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಜಿಲ್ಲೆಗೆ ಸಂಬಂಧಿಸಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಅಹವಾಲು ಸಲ್ಲಿಸಿದರು.

ರಾಷ್ಟ್ರೀಯ ಹೆದ್ದಾರಿ-69 ಬಾಣಾವರ-ಹುಳಿಯಾರು ರಸ್ತೆ ಭಾಗವನ್ನು ಪೇವ್ಡ್ ಶೋಲ್ಡರ್‌ಗಳೊಂದಿಗೆ ಎರಡು ಲೇನ್‌ಗೆ ಮೇಲರ್ಜೆಗೇರಿಸುವಂತೆ ಮನವಿ ಮಾಡಿದರು. ಈ ರಸ್ತೆಯ 194.900 ರಿಂದ 242.900 ಕಿ.ಮೀ.ವರೆಗೆ ಬಲಪಡಿಸುವ ಅಗತ್ಯವಿದ್ದು, ಯೋಜನೆಯ ಅಂದಾಜು ವೆಚ್ಚ 133.41 ಕೋಟಿ ರೂಪಾಯಿ ಆಗಿದೆ.

ಈ ರಸ್ತೆ ಭಾಗವು ಪ್ರಮುಖ ಪೂರ್ವಪಶ್ಚಿಮ ಸಂಪರ್ಕ ಮಾರ್ಗ ವಾಗಿದ್ದು, ಕಡೂರು, ಬಾಣಾವರ, ಹುಳಿಯಾರ್ ಸೇರಿ ಅನೇಕ ಪ್ರದೇಶ ಗಳನ್ನು ಸಂಪರ್ಕಿಸುತ್ತದೆ. ಜನರ ದೈನಂದಿನ ಸಂಚಾರ, ಕೃಷಿ ಉತ್ಪನ್ನಗಳ ಸಾಗಣೆ ಹಾಗು ವಾಣಿಜ್ಯ ಚಟುವಟಿ ಕೆಗಳಿಗೆ ಈ ರಸ್ತೆ ಅತ್ಯಂತ ಮುಖ್ಯವಾ ಗಿದೆ. ಸ್ಥಳೀಯ ಪ್ರಯಾಣಿಕರು, ಸಾರಿಗೆ ವಾಹನಗಳು ಮತ್ತು ರೈತರು ಈ ಮಾರ್ಗವನ್ನು ಹೆಚ್ಚಿನ ಪ್ರಮಾಣ ದಲ್ಲಿ ಬಳಸುತ್ತಿರುವುದರಿಂದ ಇದು ಪ್ರದೇಶದ ಆರ್ಥಿಕತೆಗೆ ಜೀವನಾಡಿ ಯಾಗಿದೆ. ಈ ಹಿನ್ನಲೆಯನ್ನು ಗಮನಿಸಿ ರಸ್ತೆ ಅಭಿವೃದ್ಧಿಗೆ ತುರ್ತು ಕ್ರಮ ಕೈಗೊಳ್ಳುವಂತೆ ಕೋರಿದರು.

**ಕೃಷಿ ಸಚಿವರ ಭೇಟಿ**

ಕೃಷಿ ಸಚಿವ ಶಿವರಾಜ್ ಸಿಂಗ್ ಚಹ್ವಾಣ್ ಅವರನ್ನು ಭೇಟಿಯಾಗಿ ತೆಂಗಿನಕಾಯಿಯನ್ನು ಸಬ್ ಸರ್ಫೇಸ್ ನೀರಾವರಿ ವ್ಯವಸ್ಥೆಗೆ ಸೇರಿಸಬೇಕು ಹಾಗು ರಾಜಮುಡಿ ಅಕ್ಕಿ ಯನ್ನು ಜಿಐ ಟ್ಯಾಗ್‌ಗೆ ಒಳಪಡಿಸಬೇಕೆಂದು ಕೋರಿದರು.

ತೆಂಗಿನಕಾಯಿಗೆ ಸಬ್ ಸರ್ಫೇಸ್ ನೀರಾವರಿ ವ್ಯವಸ್ಥೆ ಯನ್ನು ಕಲ್ಪಿಸಿದರೆ ನೀರಿನ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸಿ ವ್ಯರ್ಥ ಬಳಕೆ ಕಡಿಮೆ ಮಾಡಬಹುದು. ಈ ಯೋಜನೆಯ ಅನುಷ್ಠಾನದಿಂದ ನೀರಿನ ಬಳಕೆ ದಕ್ಷತೆ



ಹೆಚ್ಚುತ್ತದೆ, ತೆಂಗಿನಕಾಯಿ ಉತ್ಪಾದನೆ ಮತ್ತು ರೈತರ ಆದಾಯ ಹೆಚ್ಚುತ್ತದೆ. ಶಾಶ್ವತ ಕೃಷಿ ಪದ್ಧತಿಗಳನ್ನು ಉತ್ತೇಜಿಸುತ್ತದೆ ಮತ್ತು ಹವಾಮಾನ ಬದಲಾವಣೆಗೆ ತಕ್ಕ ಕೃಷಿಯನ್ನು ಬೆಂಬಲಿ ಸುತ್ತದೆ. ಈ ಪ್ರಸ್ತಾವವನ್ನು ತ್ವರಿತವಾಗಿ ಅನು ಮೋದಿಸಿ ಸಂಬಂಧಿತ ತೋಟಗಾರಿಕೆ ಯೋಜನೆಗಳಡಿ ಅಗತ್ಯ ಆರ್ಥಿಕ ಸಹಾಯ/ಸಬ್ಸಿಡಿಯನ್ನು ನೀಡುವಂತೆ ವಿನಂತಿಸಿದರು.

ಅದೇ ರೀತಿ ಮೈಸೂರು ರಾಜವಂಶದವರಿಂದ ರಾಜಪ್ರೀತಿ ಪಡೆದಿದ್ದ ಅಪರೂಪದ ರಾಜಮುಡಿ ಅಕ್ಕಿ ತಳಿ ರಕ್ಷಣೆಗೆ ಆದ್ಯತೆ ನೀಡುವ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು. ಕರ್ನಾಟಕ ಕೃಷಿ ಬೆಲೆ ಆಯೋಗ ಈ ಹಿಂದೆಯೇ ರಾಜಮುದಡಿ ಅಕ್ಕಿಗೆ ಟ್ಯಾಗ್ ಪಡೆಯುವುದರ ಮಹತ್ವವನ್ನು ಒತ್ತಿ ಹೇಳಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕ್ರಮ ಜರುಗಿಸಬೇಕೆಂದು ಹೇಳಿದರು.

# ಮೀಸಲಾತಿ ಹೆಚ್ಚಳಕ್ಕೆ ಕೇಂದ್ರ ಅನುಮೋದನೆ ನೀಡಲಿ: ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಪರಿಶಿಷ್ಟ ಜಾತಿ ಮತ್ತು ಪಂಗಡ ಮೀಸಲಾತಿ ಪ್ರಮಾಣ ಹೆಚ್ಚಿಸುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಬೇಕೆಂದು ಆಗ್ರಹಿಸಿ ಸಿಪಿಐ ವತಿಯಿಂದ ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನಸಂಖ್ಯೆ ಆಧರಿಸಿ ಶೈಕ್ಷಣಿಕ ಹಾಗು ನೇಮಕಾತಿಯಲ್ಲಿ ಜಾರಿಯಲ್ಲಿದ್ದ ಶೇ.15 ಮತ್ತು ಶೇ.3ರ ಮೀಸಲಾತಿಯನ್ನು ಹೆಚ್ಚಿಸಬೇಕೆಂಬ ಆಗ್ರಹದ ಹಿನ್ನಲೆಯಲ್ಲಿ ರಚಿಸಲಾಗಿದ್ದ ನ್ಯಾ.ಹೆಚ್.ಎನ್.ನಾಗವೋಹನ ದಾಸ್ ಅವರ ಆಯೋಗವು ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.17 ಮತ್ತು ಶೇ.7 ರಷ್ಟು ಹೆಚ್ಚಳ ಮಾಡಬೇಕೆಂದು ವರದಿ ನೀಡಿತು. ಈ ವರದಿಯನ್ನು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಅಂಗೀಕರಿಸಿ ಜಾರಿಗೆ ಅಗತ್ಯ ಕ್ರಮ ಕೈಗೊಂಡಿದೆ ಎಂದರು.

ಮೀಸಲಾತಿ ಪ್ರಮಾಣ ಹೆಚ್ಚಳದ ರಾಜ್ಯ ಸರ್ಕಾರದ ಕಾಯ್ದೆಯನ್ನು ಒಕ್ಕೂಟ ಸರ್ಕಾರ ಅನು ಮೋದಿಸಿ ಸಂವಿಧಾನದ ಷೆಡ್ಯೂಲ್ 9ಕ್ಕೆ ಸೇರ್ಪಡೆ ಮಾಡುವುದು ಅಗತ್ಯವಾಗಿದೆ. ಆದ್ದರಿಂದ ರಾಜ್ಯದ ಸಂಸದರು



ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕೆಂದು ಆಗ್ರಹಿಸಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಬ್ಯಾಕ್ ಲಾಗ್ ಹುದ್ದೆಗಳನ್ನು ಸಾಮಾನ್ಯ ಗುಂಪಿಗೆ ವರ್ಗಾಯಿಸಬಾರದು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಸುಮಾರು 3 ಲಕ್ಷ ಉದ್ಯೋಗಗಳನ್ನು ಭರ್ತಿ ಮಾಡಬೇಕು.

ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ಮತ್ತು ಸಂಸ್ಥೆಗಳಲ್ಲಿ ಖಾಯಂ ನೇಮಕಾತಿಯೇ ಸ್ಥಗಿತಗೊಂಡಂತಾಗಿದೆ. ಅದರಿಂದ ವಾಸ್ತವವಾಗಿ ಮೀಸಲಾತಿಯೇ ಇಲ್ಲ ದಂತಾಗಿದೆ. ಆದ್ದರಿಂದ ಎಲ್ಲಾ ಸಾರ್ವಜನಿಕ ರಂಗಗಳಲ್ಲೂ ಖಾಯಂ ಉದ್ಯೋಗಗಳನ್ನು ತುಂಬಬೇಕು ಮತ್ತು ಮೀಸಲಾತಿಯನ್ನು ರಕ್ಷಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾಡಳಿತ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್ ಕುಮಾರ್, ಎಂ.ಜಿ.ಪೃಥ್ವಿ, ವಿಜಯ ಕುಮಾರ್ ಮತ್ತಿತರರು ಇದ್ದರು.

## ಬೇಲೂರು ಪುರಸಭೆ: ಬಹುಮತ ಇದ್ದರೂ ಕಾಂಗ್ರೆಸ್ ತಳಮಳ

» ಮೊದಲನೇ ಪುಟದಿಂದ

ಕೋರಿದ್ದಾರೆ. ಅನ್ಯ ಕೋಮಿನ ಸದಸ್ಯನನ್ನು ಬೆಂಬಲಿಸುವುದು ಬಿಟ್ಟು ನನಗೆ ಬೆಂಬಲ ನೀಡಿ ಎಂದು ಅಂಗಲಾಚುತ್ತಿದ್ದಾರೆಂದು ತಿಳಿದು ಬಂದಿದೆ.

**ಕಾಂಗ್ರೆಸ್ ಸಂಘಟನೆಗೆ ಹಿನ್ನಡೆ**

ಬಹುಮತವಿದ್ದೂ ಅಧಿಕಾರ ಪಡೆಯಲು ವಿರೋಧ ಪಕ್ಷವಾದ ಬಿಜೆಪಿಯ ಮೊರೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದು ಪಕ್ಷ ಸಂಘಟನೆಗೆ ದೊಡ್ಡ ಹೊಡೆತ ಎಂದು ಪಕ್ಷದ ಹಿರಿಯರು ಅಭಿಪ್ರಾಯಪಟ್ಟಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಜಿಲ್ಲಾ ಮಟ್ಟದ ನಾಯಕರು, ಸ್ಥಳೀಯ ಮುಖಂಡರು ಮಧ್ಯಪ್ರವೇಶಿಸಿ ಅತೃಪ್ತ ಸದಸ್ಯರ ಮನವೊಲಿಸದಿದ್ದರೆ ಬೇಲೂರು ಪುರಸಭೆಯಲ್ಲಿ ಅನಿರೀಕ್ಷಿತ ರಾಜಕೀಯ ಬದಲಾವಣೆಗಳು ಸಂಭವಿಸುತ್ತಾ ಇದ್ದರೆ ಮತದಾರರು ಜನಪ್ರತಿನಿಧಿಗಳನ್ನು ನಂಬುವುದಾದರೂ ಹೇಗೆ. ಇದು ಪ್ರಜಾಪ್ರಭುತ್ವದಲ್ಲಿ ಪಕ್ಷದ ಸಿದ್ಧಾಂತಗಳಿ ಗಿಂತ ವೈಯಕ್ತಿಕ ಅಧಿಕಾರ ದಾಹ ಹೇಗೆ ಮೇಲುಗೈ ಸಾಧಿಸುತ್ತದೆ ಎಂಬುದಕ್ಕೆ ನಿದರ್ಶನ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

## ಏ.28 ರಂದು ಕೆಡಿಪಿ ಸಭೆ

**ಹಾಸನ :** ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಏ.28 ರಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಪಂಚಾಯಿತಿ ಸಭಾಂಗಣ ದಲ್ಲಿ ಕೆ.ಡಿ.ಪಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

# ಯುದ್ಧದಿಂದ 50 ಬಿಲಿಯನ್ ಡಾಲರ್ ತೈಲ ಉತ್ಪಾದನೆ ಸ್ಥಗಿತ

• ಪ್ರಜೋದಯ ವರದಿ

**ಲಂಡನ್:** ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ನಡೆದ ಯುದ್ಧದಿಂದ ಸುಮಾರು 50 ಬಿಲಿಯನ್ ಡಾಲರ್ (4.63 ಲಕ್ಷ ಕೋಟಿ ರೂ.) ಮೊತ್ತದ ಕಚ್ಚಾ ತೈಲ ಉತ್ಪಾದನೆ ಸ್ಥಗಿತಗೊಂಡಿದೆ. ಜಾಗತಿಕವಾಗಿ ಅದರ ಪರಿಣಾಮಗಳು ಹಲವು ತಿಂಗಳುಗಳವರೆಗೆ ಅಥವಾ ವರ್ಷಗಳವರೆಗೂ ಇರಲಿವೆ ಎಂದು ಅಂತಾರಾಷ್ಟ್ರೀಯ ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸಿದ್ದಾರೆ.

ಲೆಬನಾನ್ ಹಾಗು ಇಸ್ರೇಲ್ ನಡುವಣ ತಾತ್ಕಾಲಿಕ ಕದನ ವಿರಾಮದ ಹಿನ್ನಲೆ ಯಲ್ಲಿ ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಸಂಪೂರ್ಣ ಮುಕ್ತಗೊಳಿಸುತ್ತಿ ರುವುದಾಗಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಶುಕ್ರವಾರ ಘೋಷಿಸಿದ್ದರು. ಏತನ್ಮಧ್ಯೆ, ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಶೀಘ್ರದಲ್ಲೇ ಯುದ್ಧ ಅಂತ್ಯಗೊಳ್ಳಲಿದೆ ಎಂದು ಭರವಸೆ ವ್ಯಕ್ತಪಡಿಸಿದ್ದರು. ಆದರೆ, ಈ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ.

ಫೆ.28ರಂದು ಸಂಘರ್ಷ ಆರಂಭವಾದಾಗಿನಿಂದ ಸುಮಾರು 50 ಕೋಟಿ ಬ್ಯಾರೆಲ್‌ಗೂ ಹೆಚ್ಚು ಕಚ್ಚಾ ತೈಲ ಮತ್ತು ಅನಿಲವು ಜಾಗತಿಕ ಮಾರುಕಟ್ಟೆಯಿಂದ ಹೊರಗುಳಿದಿದೆ. ಇದು, ಆಧುನಿಕ ಕಾಲಘಟ್ಟದಲ್ಲಿ ಇಂಧನ ಪೂರೈಕೆಗೆ ಎದುರಾದ ಅತಿದೊಡ್ಡ ತೊಡಕು ಎಂಬುದಾಗಿ ಮಾರುಕಟ್ಟೆ ಕುರಿತ ಮಾಹಿತಿ ನೀಡುವ ಕೆಪ್ಲರ್ ತಿಳಿಸಿದೆ. ಅಷ್ಟು ತೈಲ ಇಲ್ಲದಿದ್ದರೆ, ಜಾಗತಿಕವಾಗಿ 10 ವಾರಗಳವರೆಗೆ ವಿಮಾನ ಯಾನ ಸಂಚಾರ ಸ್ಥಗಿತಗೊಳ್ಳಲಿದೆ. ಇಲ್ಲವೇ, ಜಾಗತಿಕವಾಗಿ ಯಾವುದೇ ವಾಹನ 11 ದಿನಗಳವರೆಗೆ ರಸ್ತೆಗಿಳಿಯುವುದಿಲ್ಲ ಅಥವಾ ಜಾಗತಿಕ ಆರ್ಥಿಕತೆಗೆ ಐದು ದಿನಗಳವರೆಗೆ ತೈಲ ಸಾಗಣೆ ಬಂದ್ ಆಗಲಿದೆ ಎಂದಿದ್ದಾರೆ.

ಜಗತ್ತಿನಾದ್ಯಂತ ಇರುವ ಎಲ್ಲಾ ಅಂತಾರಾಷ್ಟ್ರೀಯ ಹಡಗು ಮಾರುಕಟ್ಟೆಯನ್ನು ಇಷ್ಟು ಇಂಧನವನ್ನು ಬಳಸಿಕೊಂಡು ಸುಮಾರು ನಾಲ್ಕು ತಿಂಗಳವರೆಗೆ ನಿರ್ವಹಿ ಸಬಹುದೆಂಬ ಲೆಕ್ಕಾಚಾರಗಳೂ ಪ್ರಕಟವಾಗಿವೆ. ಸಂಘರ್ಷದಿಂದಾಗಿ ಅರಬ್ ರಾಷ್ಟ್ರ ಗಳಲ್ಲಿ ಮಾರ್ಚ್ ವೇಳೆ ನಿತ್ಯ ಸುಮಾರು 80 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಉತ್ಪಾದನೆಗೆ ಹಿನ್ನಡೆಯಾಗಿದೆ. ಇದು, ಜಗತ್ತಿನ ಪ್ರಮುಖ ತೈಲ ಕಂಪನಿಗಳಾದ ಎಕ್ಸಾನ್ ಮೊಬಿಲ್ ಮತ್ತು ಚೆವ್ರಾನ್ ಎರಡರ ಒಟ್ಟು ಉತ್ಪಾದನಾ ಸಾಮರ್ಥ್ಯಕ್ಕೆ ಸಮ. ಸೌದಿ ಅರೇಬಿಯಾ, ಕತಾರ್, ಯುಎಇ, ಕುವೈತ್, ಬಹ್ರೇನ್ ಮತ್ತು ಒಮಾನ್ ದೇಶಗಳಿಂದ ಫೆಬ್ರುವರಿಯಲ್ಲಿ ಸುಮಾರು 196 ಲಕ್ಷ ಬ್ಯಾರೆಲ್ ನಷ್ಟು ಜೆಟ್ ಇಂಧನ ರಫ್ತು ಮಾಡಲಾಗಿತ್ತು.

### ಭಾರತದ ಧ್ವಜವಿದ್ದ 2 ಹಡಗುಗಳ ಮೇಲೆ ಇರಾನ್ ಗುಂಡಿನ ದಾಳಿ



ನವದೆಹಲಿ: ಹೊರ್ಮುಜ್ ಜಲಸಂಧಿ ಬಳಿ ಭಾರತದ ಧ್ವಜವಿದ್ದ ಎರಡು ತೈಲ ಟ್ಯಾಂಕರ್ ಹಡಗುಗಳ ಮೇಲೆ ಇರಾನ್‌ನ ಗನ್ ಬೋಟ್‌ನಿಂದ ಗುಂಡಿನ ದಾಳಿ ನಡೆದಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ. ಕೂಡಲೇ ಎರಡೂ ಹಡಗುಗಳು ಈಶಾನ್ಯ ಒಮಾನ್ ಕಡೆಗೆ ವಾಪಸ್ ಆಗಿದ್ದು, ಯಾರಿಗೂ ಗಾಯಗಳಾಗಿಲ್ಲ, ಹಡಗುಗಳಿಗೂ ಹಾನಿ ಯಾಗಿಲ್ಲ. ದಾಳಿಗೊಳಗಾದ ಎರಡು ಹಡಗುಗಳ ಪೈಕಿ ಒಂದು ಅತಿ ದೊಡ್ಡ ಕಚ್ಚಾ ತೈಲ ವಾಹಕ(ವಿಎಲ್‌ಸಿಸಿ) ಆಗಿದ್ದು, ಬೃಹತ್ ಗಾತ್ರದ ಟ್ಯಾಂಕರ್ ಹೊಂದಿರುವ ಭಾರಿ ಪ್ರಯಾಣದ ಕಚ್ಚಾ ತೈಲ ಸಾಗಿಸುವ ಹಡಗುಗಳನ್ನು ವಿಎಲ್‌ಸಿಸಿ ಎನ್ನಲಾಗುತ್ತದೆ. ಘಟನೆಯ ನಂತರ, ಭಾರತವು ಇರಾನಿನ ರಾಯಭಾರಿ ಜೊತೆ ಮಾತುಕತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ, ವಿದೇಶಾಂಗ ಸಚಿವಾಲಯವು ಶೀಘ್ರ ಹೇಳಿಕೆ ಬಿಡುಗಡೆ ಮಾಡುವ ಸಾಧ್ಯತೆಯಿದೆ.

ಅಮೇರಿಕಾ ನೌಕಾ ಪಡೆಯು ಇರಾನ್ ಬಂದರುಗಳಿಗೆ ನಿರ್ಬಂಧ ಮುಂದು ವರಿಸಿರುವುದರಿಂದ ಹೊರ್ಮುಜ್ ಕಣಿವೆಯನ್ನು ಮತ್ತೆ ಮುಚ್ಚುತ್ತಿರುವುದಾಗಿ ಇಂದು ಇರಾನ್ ಘೋಷಿಸಿತ್ತು. ಶುಕ್ರವಾರ ಲೆಬನಾನ್ ಮತ್ತು ಇಸ್ರೇಲ್ ನಡುವೆ 10 ದಿನಗಳ ಯುದ್ಧ ವಿರಾಮ ಘೋಷಣೆಯಾದ ಬೆನ್ನಲ್ಲೇ ಹೊರ್ಮುಜ್ ಅನ್ನು ಸಂಚಾರ ಮುಕ್ತ ಗೊಳಿಸಿರುವುದಾಗಿ ಇರಾನ್ ಹೇಳಿತ್ತು.

## ಹಣ ಪಡೆದು ವ್ಯಕ್ತಿಯಿಂದ ವಂಚನೆ: ಮಹಿಳೆ ಕಣ್ಣೀರು

• ಪ್ರಜೋದಯ ವರದಿ



**ಹಾಸನ:** ಜಮೀನು ಮಾರಾಟ ಮಾಡು ವುದಾಗಿ ಹೇಳಿದ್ದ ವ್ಯಕ್ತಿ ನಮ್ಮಿಂದ ಮುಂಗಡ ಹಣ ಪಡೆದು ಈಗ ಜಮೀನು ಬಿಟ್ಟುಕೊಡದೆ ಹಾಗು ನೀಡಿರುವ ಹಣವನ್ನು ವಾಪಾಸ್ ನೀಡದೆ ವಂಚಿಸುತ್ತಿದ್ದಾರೆಂದು ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿ ಮಾವಿನಕೆರೆ ಗ್ರಾಮದ ತೇಜಸ್ವಿನಿ ಅವರು ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಅರಣ್ಯ ಇಲಾಖೆ ನಿವೃತ್ತ ನೌಕರ ಶಿವಯ್ಯ ಎಂಬುವವರು 20 ಗುಂಟೆ ಜಮೀನನ್ನು 20 ಲಕ್ಷ ರೂ.ಗೆ ಮಾರಾಟ ಮಾಡುವುದಾಗಿ ಒಪ್ಪಂದ ಮಾಡಿಕೊಂಡು ಮುಂಗಡ 8 ಲಕ್ಷ ರೂ. ಪಡೆದಿದ್ದರು. ಬಾಕಿ ಹಣ ಪಡೆದು ಜಮೀನು ನಮ್ಮ ಹೆಸರಿಗೆ ಖಾತೆ ಮಾಡಿಕೊಡಿ ಎಂದು ಕೇಳಿದರೆ ಮಕ್ಕಳು ಒಪ್ಪುತ್ತಿಲ್ಲವೆಂದು ಇಲ್ಲಸಲ್ಲದ ನೆಪ ಹೇಳಿಕೊಂಡು ಬಂದರು. ನಂತರ ಅವರು ನೀಡಿದ್ದ ಚೆಕ್‌ನಿಂದ ನಾವು ನ್ಯಾಯಾಲಯ ಮೆಟ್ಟಿ ಲೇರಿದ್ದೇವೆ. ಎರಡು ವರ್ಷಗಳಿಂದ ವಿಚಾರಣೆ ನಡೆಯುತ್ತಿದ್ದು, ಈ ನಡುವೆ ನಮ್ಮ ಮೇಲೆ ಹಲ್ಲೆ ನಡೆಸುತ್ತಿದ್ದಾರೆಂದು ಆರೋಪಿಸಿದರು.

ನಮ್ಮ ತಾಯಿ ಯಶೋಧಮ್ಮ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಶಿವಯ್ಯ ಜೊತೆಗೆ ರಾಜ ಶೇಖರ, ಭೀಮ ಹಾಗು ದರ್ಶನ್ ಎಂಬುವವರು ನಮ್ಮ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸುವ ಎಚ್ಚರಿಕೆ ಹಾಕಿದ್ದಾರೆ. ಈ ಬಗ್ಗೆ ಗಂಡಸಿ ಠಾಣೆಗೆ ದೂರು ನೀಡಿದರೆ ಪೊಲೀಸರು ನಮ್ಮನ್ನೇ ಆರೋಪಿಗಳಂತೆ ಪರಿಗಣಿಸು ತ್ತಿದ್ದಾರೆಂದು ಕಣ್ಣೀರು ಹಾಕಿದರು.

ಕೊಲೆ ಬೆದರಿಕೆ ಹಾಕುವುದು, ನಮ್ಮ ತೋಟದ ವಸ್ತುಗಳನ್ನು ಕಳವು ಮಾಡುವುದು, ಬೆಂಕಿ ಹಚ್ಚಿ ಬೆಲೆ ಬಾಳುವ ವಸ್ತುಗಳನ್ನು ನಾಶಪಡಿಸುವ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಅನೇಕ ದೂರು ನೀಡಿದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಕರಣ ದಾಖಲಿಸಿ ಆರೋಪಿಗಳ ಬಂಧಿಸುವಂತೆ ಅರಸೀಕೆರೆ ಡಿವೈಎಸ್‌ಪಿ ಹೇಳಿದ್ದರೂ ಗಂಡಸಿ ಪಿಎಸ್‌ಐ ಆರತಿ ಅವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

# ಆರ್‌ಸಿಬಿ ವಿರುದ್ಧ ಡೆಲ್ಲಿಗೆ 6 ವಿಕೆಟ್ ಭರ್ಜರಿ ಜಯ

• ಪ್ರಜೋದಯ ವರದಿ

**ಬೆಂಗಳೂರು:** ಐಪಿಎಲ್ ಟೂರ್ನಿಯ ರೋಚಕ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 6 ವಿಕೆಟ್‌ಗಳ ಅಂತರದಿಂದ ಮಣಿಸಿದೆ.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿ ನೀಡಿದ್ದ 176 ರನ್‌ಗಳ ಸವಾಲಿನ ಗುರಿಯನ್ನು ಬೆನ್ನು ಹತ್ತಿದ ಡೆಲ್ಲಿ ತಂಡ 19.5 ಓವರ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 178 ರನ್ ಕಲೆಹಾಕಿ 6 ವಿಕೆಟ್ ಅಂತರದಲ್ಲಿ ಭರ್ಜರಿ ಜಯ ಸಾಧಿಸಿತು.

ಡೆಲ್ಲಿ ಪರ ಕನ್ನಡಿಗ ಕೆ.ಎಲ್.ರಾಹುಲ್ (57) ಅರ್ಧಶತಕ ಗಳಿಸಿದರೆ, ಟ್ರಿಸ್ಟಾನ್ ಸ್ಟಬ್ಸ್ ಅಜೇಯ 60 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಉಳಿದಂತೆ ಡೆಲ್ಲಿ ಪರ ಅಕ್ಸರ್ ಪಟೇಲ್ 26 ರನ್ ಗಳಿಸಿ ರಿಟೈರ್ಡ್ ಹರ್ಟ್ ಆದರೆ, ಡೇವಿಡ್ ಮಿಲ್ಲರ್ ಅಜೇಯ 22 ರನ್ ಗಳಿಸಿದರು.

ಸವಾಲಿನ ಗುರಿ ಬೆನ್ನು ಹತ್ತಿದ ಡೆಲ್ಲಿಗೆ ಆರಂಭಿಕ ಆಘಾತ ಎದುರಾಗಿತ್ತು. ಆರ್‌ಸಿಬಿ ತಂಡದ ಹಿರಿಯ ವೇಗಿ ಭುವನೇಶ್ವರ್ ಕುಮಾರ್ ಆರಂಭದಲ್ಲೇ 3 ಪ್ರಮುಖ ವಿಕೆಟ್ ಕಬಳಿಸಿ ಡೆಲ್ಲಿಗೆ ಮರ್ಮಾಘಾತ ನೀಡಿದರು. ಡೆಲ್ಲಿ ತಂಡದ ಆರಂಭಿಕ ಆಟಗಾರ ನಿಸ್ಸಾಂಕಾ ಕೇವಲ 1 ರನ್ ಗಳಿಸಿ ಭುವಿ ಬೌಲಿಂಗ್ ನಲ್ಲಿ ಎಲ್‌ಬಿ ಬಲೆಗೆ ಬಿದ್ದರು.

ಬಳಿಕ ಕನ್ನಡಿಗ ಕರುಣ್ ನಾಯರ್ ಕೂಡ ಕೇವಲ



5 ರನ್ ಗಳಿಸಿ ಮತ್ತದೇ ಭುವಿಗೆ ವಿಕೆಟ್ ಒಪ್ಪಿಸಿದರು. ಕರುಣ್ ಬೆನ್ನಲ್ಲೇ ಸಮೀರ್ ರಿಜ್ವಿ ಕೂಡ 2 ರನ್ ಗಳಿಸಿ ಭುವಿಗೆ ವಿಕೆಟ್ ಒಪ್ಪಿಸಿದರು.

ಆದರೆ ಮತ್ತೊಂದು ಬದಿಯಲ್ಲಿ ಕೆ.ಎಲ್. ರಾಹುಲ್ ಮಾತ್ರ ಸಮ ಯೋಚಿತ ಬ್ಯಾಟಿಂಗ್ ಪ್ರದರ್ಶನ ನೀಡಿದ ತಂಡಕ್ಕೆ ಆಸರೆಯಾದರು. ರಾಹುಲ್ ಕೇವಲ 34 ಎಸೆತಗಳಲ್ಲಿ 2 ಸಿಕ್ಸರ್ ಮತ್ತು 6 ಬೌಂಡರಿ ಸಹಿತ 57 ರನ್ ಗಳಿಸಿದರು. ಅವರಿಗೆ ಸ್ಟಬ್ಸ್ ಉತ್ತಮ ಸಾಥ್ ನೀಡಿದರು. ಈ ಜೋಡಿ 4ನೇ ವಿಕೆಟ್‌ಗೆ 69 ರನ್ ಗಳ ಭರ್ಜರಿ ಜೊತೆಯಾಟವಾಡಿತು.

ಬಳಿಕ ಅಕ್ಸರ್ ಪಟೇಲ್ ಮತ್ತು ಡೇವಿಡ್ ಮಿಲ್ಲರ್ ಜೊತೆ ಉತ್ತಮ ಜೊತೆಯಾಟವಾಡಿದ ಸ್ಟಬ್ಸ್ ಗೆಲುವಿನ ಔಪಚಾರಕತೆ ಮುಕ್ತಾಯ ಗೊಳಿಸಿದರು. ಅಂತಿಮವಾಗಿ ಡೆಲ್ಲಿ ತಂಡ 19.5 ಓವರ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 178 ರನ್ ಕಲೆಹಾಕಿ 6 ವಿಕೆಟ್ ಅಂತರದಲ್ಲಿ ಭರ್ಜರಿ ಜಯ ಸಾಧಿಸಿತು.

ಅಂತೆಯೇ ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 3 ವಿಕೆಟ್ ಕಬಳಿಸಿದರೆ, ಕೃನಾಲ್ ಪಾಂಡ್ಯ 1 ವಿಕೆಟ್ ಪಡೆದರು.



## ಶಾಸಕ ಎ.ಮಂಜುಗೆ ದಲಿತರ ಮೇಲೆ ನೈಜ ಕಾಳಜಿ ಇಲ್ಲ

• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ಶಾಸಕ ಎ.ಮಂಜು ಪ್ರತಿವರ್ಷ ದಲಿತರ ಮನೆಯಲ್ಲಿ ವಾಸ್ತವ್ಯದ ನಾಟಕ ಮಾಡಿ ಸಮುದಾಯದ ಪ್ರೀತಿ ಗಳಿಸಲು ಯತ್ನಿಸುತ್ತಿದ್ದಾರೆ ಹೊರತು ಅವರಿಗೆ ಸಮು ದಾಯದ ಬಗ್ಗೆ ನೈಜ ಕಾಳಜಿ ಇಲ್ಲವೆಂದು ದಲಿತ ಮುಖಂಡ ನಟರಾಜ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಪಟ್ಟಣದಲ್ಲಿ ಅಂಬೇಡ್ಕರ್ ಭವನ ಕಾಮಗಾರಿ ಆರಂಭವಾಗಿ 11 ವರ್ಷ ಕಳೆದರೂ ಇನ್ನು ಪೂರ್ಣಗೊಂಡಿಲ್ಲ, ತಾಲ್ಲೂಕು ಕಚೇರಿ ಸಮೀಪ ಅಂಬೇಡ್ಕರ್ ಪುತ್ಥಳಿ ಅನಾವರಣ ಮಾಡಿರುವುದನ್ನು ಹೊರತುಪಡಿಸಿ ಬೇರೆ ಯಾವ ಕೆಲಸವನ್ನು ಅವರು ಮಾಡಿಲ್ಲ. ದಲಿತರ ಮೇಲೆ ದೌರ್ಜನ್ಯ ಎಸಗಲು ಬಂದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಏ.14 ರಂದು ತಾಲ್ಲೂಕು ಆಡಳಿತ ದಿಂದ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಕೇವಲ ಸುಳ್ಳು ಭರವಸೆ ನೀಡಿದ್ದರಿಂದ ನಾನು ಪ್ರತಿರೋಧ ತೋರಬೇಕಾಯಿತು ಎಂದರು.

ಅಬ್ಬೂರು ಮಾಚನಹಳ್ಳಿ ಗ್ರಾಮದ ಚೆನ್ನಮ್ಮ ಅವರ ಮನೆ ಶಿಥಿಲಗೊಂಡ ಹಿನ್ನಲೆ ಹೊಸ ಮನೆ ನಿರ್ಮಾಣ ಕಾರ್ಯ ಆರಂಭವಾಗಿತ್ತು. ಈ ಬಗ್ಗೆ ಗ್ರಾಮದಲ್ಲೇ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಬಳಿಕ ಎಸ್‌ಸಿ, ಎಸ್‌ಟಿ ಕುಂದು ಕೊರತೆ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದಾಗ 11★23 ಅಳತೆಯಲ್ಲೇ ಮನೆ ನಿರ್ಮಿಸಲು ತಾಕೀತು ಮಾಡಿದರು. ಇಷ್ಟು ಕಡಿಮೆ ಜಾಗದಲ್ಲಿ ಮನೆ ನಿರ್ಮಾಣ ಸಾಧ್ಯವೇ ಎಂದು ಪ್ರಶ್ನಿಸಿದರು.

ನನಗೆ, ನನ್ನ ತಾಯಿಗೆ ಸಹಾಯ ಮಾಡಿರುವುದಾಗಿ ಶಾಸಕರು ಹೇಳಿದ್ದಾರೆ. ಆದರೆ ಸಹಾಯ ಏನೆಂದು ಸ್ಪಷ್ಟಪಡಿಸಿದರೆ, ತಾವು ಅವರ ಪರ ಪ್ರಚಾರ ಮಾಡಲು ಸಿದ್ಧ ಎಂದು ಸವಾಲು ಹಾಕಿದರು. ಇದೇ ವೇಳೆ ಅರಕಲಗೂಡು ತಾಲ್ಲೂಕಿನಲ್ಲಿ ದಲಿತರಿಗೆ ಅವರು ಮಾಡಿರುವ ಅಭಿವೃದ್ಧಿ ಕಾಮಗಾರಿ ಪಟ್ಟಿ ನೀಡುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ದೇವರಾಜ್, ಪರಮೇಶ್ ಹಾಗು ಗಣೇಶ್ ಉಪಸ್ಥಿತರಿದ್ದರು.

# ಏ.25 ರಿಂದ 2 ದಿನ ಪವರ್ ಲಿಫ್ಟಿಂಗ್ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏ.25 ಮತ್ತು 26ರಂದು ರಾಜ್ಯ ಮಟ್ಟದ ಬಾಲಕ-ಬಾಲಕಿಯರ ಸಬ್ ಜೂನಿಯರ್ ಕ್ಲಾಸಿಕ್ ಮತ್ತು ಎಕ್ಯುಪುಡ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್-2026 ಆಯೋಜಿಸಲಾಗಿದೆ ಎಂದು ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ಅಧ್ಯಕ್ಷ ವಿಜಯ್ ಕುಮಾರ್ ಅವರು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ, ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆ (ಮಂಗಳೂರು) ಅವರ ಅನುಮತಿಯೊಂದಿಗೆ ಹಾಗು ಟೈಮ್ಸ್ ಗುರುಕುಲ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಎರಡು ದಿನಗಳ ಕಾಲ ನಡೆಯಲಿರುವ ಸ್ಪರ್ಧೆಯಲ್ಲಿ ವಿವಿಧ ದೇಹ ತೂಕ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿವೆ. ಪ್ರತಿ ವಿಭಾಗದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಲ್ಲಿ ವಿಜೇತರಾದವರಿಗೆ ಆಕರ್ಷಕ ಪದಕ




ಹಾಗು ಪ್ರಮಾಣ ಪತ್ರ ಪ್ರದಾನ ಮಾಡಲಾಗುವುದು. ಅಲ್ಲದೆ, ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗುತ್ತದೆಂದು ಮಾಹಿತಿ ನೀಡಿದರು.

ಕ್ಲಾಸಿಕ್ ಮತ್ತು ಎಕ್ಯುಪುಡ್ ವಿಭಾಗಗಳಲ್ಲಿ ಪುರುಷರು ಹಾಗು ಮಹಿಳೆಯರಿಗೆ ಪ್ರತ್ಯೇಕ ಕರ್ನಾಟಕ ಬೆಸ್ಟ್ ಲಿಫ್ಟರ್ ಪ್ರಶಸ್ತಿಯೂ ನೀಡಲಾಗುತ್ತದೆ. ರಾಷ್ಟ್ರ ಮಟ್ಟದ ತೀರ್ಪುಗಾರರು ಸ್ಪರ್ಧೆಯನ್ನು ನಿರ್ವಹಿಸಲಿದ್ದು, ಪಾರದರ್ಶಕತೆ ಕಾಪಾಡಲಾಗುತ್ತದೆ. ಎರಡೂ ವಿಭಾಗಗಳಲ್ಲಿ ತಂಡ ಚಾಂಪಿಯನ್ ಶಿಪ್ ಕೂಡ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಸಿಂಗ್ಲೆಟ್, ಉದ್ದನೆಯ ಸಾಕ್ಸ್, ಶೂ ಮತ್ತು ಬೆಲ್ಟ್ ಕಡ್ಡಾಯವಾಗಿ ಧರಿಸಬೇಕು ಎಂದು ಸೂಚಿಸಲಾಗಿದೆ.

ಜಿಲ್ಲೆಯ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸಿ ಸದು ಪಯೋಗ ಪಡೆಯುವಂತೆ ಮನವಿ ಮಾಡಿದರು.

ಜಿಲ್ಲೆಯ ವ್ಯಾಯಾಮ ಶಾಲೆಗಳವರು ಪವರ್ ಲಿಫ್ಟಿಂಗ್ ಸಂಸ್ಥೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿಕೊಳ್ಳಬೇಕಾಗಿದೆ. ಸಬ್‌ಜೂನಿಯರ್ ಪುರುಷರ ವಿಭಾಗದಲ್ಲಿ 53 ಕೆಜಿ ರಿಂದ 120+ ಕೆಜಿ ವರೆಗೆ ಹಾಗೂ ಮಹಿಳೆಯರ ವಿಭಾಗದಲ್ಲಿ 43 ಕೆಜಿರಿಂದ 84+ ಕೆಜಿ ವರೆಗೆ ತೂಕ ವರ್ಗಗಳನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9483467084, 99457 63698, 9964182654 ನಂಬರ್‌ಗಳನ್ನು ಸಂಪರ್ಕಿಸಲು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಹನುಮಂತೇಗೌಡ, ನಿರಂಜನ್‌ರಾಜ್, ತ್ರಿಭುವನ್ ಗೌಡ, ಅಶ್ವಥ್, ಸಂತೋಷ್ ಶೆಟ್ಟಿ, ಶಿವಸ್ವಾಮಿ ಇದ್ದರು.

# ಸಾವಯವ ಕೃಷಿ ಜೊತೆಗೆ ಮೀನು ಸಾಕಾಣಿಕೆಗೂ ಸೈ

**-ಆರ್. ಶ್ರೀನಿವಾಸ್ ಉಳ್ಳಾವಳ್ಳಿ**

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಾವಯವ ಕೃಷಿ ಜೊತೆಗೆ ಮೀನು ಸಾಕಾಣಿಕೆಯಲ್ಲಿಯೂ ನಿರೀಕ್ಷೆ ಯಂತೆ ಯಶಸ್ಸು ಕಾಣುವ ಮೂಲಕ ತಾಲ್ಲೂಕಿನ ಮಂಡಲೀಕನಹಳ್ಳಿ ಗ್ರಾಮದ ಕೆ.ಪೃಥ್ವಿಕುಮಾರ್ ರೈತರಿಗೆ ಮಾದರಿಯಾಗಿದ್ದಾರೆ.

ಕೆ.ಪೃಥ್ವಿಕುಮಾರ್ ಅವರು 12 ಎಕರೆ ಕೃಷಿ ಜಮೀನು ಹೊಂದಿದ್ದು ಕಳೆದ 7-8 ವರ್ಷಗಳಿಂದ ರಾಸಾಯನಿಕ ಗೊಬ್ಬರ ಹಾಗು ಔಷಧಿಗಳ ಬಳಕೆಯನ್ನು ಬದಿಗೊತ್ತಿ ಸಾವಯವ ಕೃಷಿ ಅನುಸರಿಸುವ ಮೂಲಕ ನಿರೀಕ್ಷೆಯಂತೆ ಯಶಸ್ಸು ಕಂಡಿದ್ದಾರೆ.

ತಮಗಿರುವ ಜಮೀನಿನಲ್ಲಿ 400 ತೆಂಗಿನ ಮರ, 1 ಸಾವಿರ ಬಾಳೆ, ಮಾವು, ಹಲಸು, ಸೀಬೆ, ನಿಂಬೆ, ಪಪ್ಪಾಯಿ, ಸಪೋಟ, ದಾಳಿಂಬೆ ಸೇರಿ ವಿವಿಧ ಹಣ್ಣಿನ ಗಿಡಗಳನ್ನು ಬೆಳೆಸಿದ್ದಾರೆ. ತೆಂಗು, ಬಾಳೆ ಸೇರಿ ಎಲ್ಲಾ ಗಿಡ-ಮರಗಳಿಗೂ ಹನಿ ನೀರಾವರಿ ಹಾಗು ತುಂತುರು ನೀರಾವರಿ ಪದ್ಧತಿ ಅಳವಡಿಸಿ ನೀರಾಯಿಸುವ ವ್ಯವಸ್ಥೆ ಮಾಡಿರುವುದು ವಿಶೇಷವಾಗಿದೆ.

ಕಳೆದ 7 ವರ್ಷಗಳ ಹಿಂದೆ ಸಾವಯವ ಕೃಷಿ



ಅನುಸರಿಸಿದ ಪ್ರಾರಂಭದ 2 ವರ್ಷದಲ್ಲಿ ನಿರೀಕ್ಷೆಯಂತೆ ಫಸಲು ಹಾಗು ಲಾಭ ಸಿಗದೆ ತೊಂದರೆಯಾಗಿತ್ತು. ಆರ್ಥಿಕವಾಗಿ ಹಿನ್ನಡೆ ಅನುಭವಿಸಬೇಕಾಯಿತು. ನಂತರದ ವರ್ಷಗಳಿಂದ ನಿರೀಕ್ಷೆಯಂತೆ ಫಸಲು ಹಾಗು ಲಾಭ ಸಿಗುತ್ತಿರುವುದು ಸಂತಸ ತಂದಿದೆ ಎಂದು ಯುವ ರೈತ ಕೆ.ಪೃಥ್ವಿಕುಮಾರ್ ಅವರು ತಿಳಿಸಿದರು.

**ಮೀನು ಸಾಕಾಣಿಕೆ:** ಕೃಷಿ ಜೊತೆಗೆ ಮೀನು ಸಾಕಾಣಿಕೆಗೂ ಮುಂದಾಗಿದ್ದಾರೆ ಪೃಥ್ವಿ. ತಮ್ಮ ಜಮೀನಿನ ಒಂದು ಭಾಗದಲ್ಲಿ 200★100 ಉದ್ದಗಲ ಹಾಗು 15 ಅಡಿ ಆಳದ ಅಳತೆಯುಳ್ಳ ದೊಡ್ಡದಾದ ಕೃಷಿ ಹೊಂಡ ನಿರ್ಮಿಸಿದ್ದು ಟಾರ್ಪಲ್ ಹೊದಿಕೆ ಮಾಡಲಾಗಿದೆ. ಸುತ್ತಲು ತಂತಿ ಬೇಲಿ ನಿರ್ಮಿಸಿ ಗ್ರೀನ್ ಸ್ಕ್ರೀನ್ ಮತ್ತು ವ್ ೦ ೀ ಲ್ಬ ಗ ದ ಲ್ಲಿ ಸಂಪೂರ್ಣ ಬರ್ಡ್ ನೆಟ್ ಅಳವಡಿಸಲಾಗಿದೆ.

ಹೊಂಡದಲ್ಲಿ ನೀರು ತುಂಬಿಸಿ ಮುರಾಲ್ ಎಂಬ ವಿಶೇಷ ತಳಿಯ 30 ಸಾವಿರ ಮೀನಿನ ಮರಿಗಳನ್ನು ಬಿಡಲಾಗಿದೆ. ಈ ವಿಶೇಷವಾದ ತಳಿಯ ಮೀನಿನ ಮರಿಗಳಿಗೆ ತಲಾ 15 ರೂ. ಬೆಲೆ ನೀಡಿ ಖರೀದಿಸಲಾಗಿದೆ. ಈ ವಿಶೇಷ ತಳಿಯ ಮೀನುಗಳನ್ನು ಕರ್ನಾಟಕ ಸೇರಿ ಆಂಧ್ರ ಹಾಗೂ ತಮಿಳುನಾಡು ರಾಜ್ಯದಲ್ಲಿ ಸಾಕಾಣಿಕೆ ಮಾಡಲಾಗುತ್ತದೆ. ಕಳೆದ ಆರು ತಿಂಗಳ ಹಿಂದೆ ಹೊಂಡಕ್ಕೆ ಮೀನಿನ ಮರಿಗಳನ್ನು ಬಿಡಲಾಗಿದ್ದು ಇನ್ನು 4 ತಿಂಗಳಲ್ಲಿ ಫಸಲು ಸಿಗಲಿದೆ. ಅಂದರೆ ಮಾರಾಟದ ಹಂತಕ್ಕೆ ಮೀನು ಬೆಳೆಯಲಿದೆ. ಬೆಳಿಗ್ಗೆ ಹಾಗು ಸಂಜೆ 120 ಕೆ.ಜಿ. ಗ್ರೋವೆಲ್ ಎಂಬ ಆಹಾರ ವನ್ನು ಮೀನುಗಳಿಗೆ ನೀಡಲಾಗುತ್ತಿದೆ. ಸದ್ಯಕ್ಕೆ ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ಈ ತಳಿಯ ಮೀನು ಕೆ.ಜಿ.ಗೆ ತಲಾ 300 ರಿಂದ 350 ರೂ. ದರ ಸಿಗುತ್ತಿದೆ.

ಮೀನು ಸಾಕಾಣಿಕೆಗೆ ಪ್ರಾರಂಭದಿಂದ ಇದುವರೆಗೂ ಹೊಂಡ, ಬೇಲಿ, ಸ್ಕ್ರೀನ್, ಟಾರ್ಪಲ್, ಬರ್ಡ್ ನೆಟ್, ಮೀನಿನ ಮರಿ ಹಾಗು ನಿರ್ವಹಣೆಯ ವ್ಯತ್ಯಾಸ ಸೇರಿ 22 ಲಕ್ಷ ರೂ. ಖರ್ಚಾಗಿದ್ದು ಉತ್ತಮ ನಿರ್ವಹಣೆ ಮಾಡಲಾಗುತ್ತಿದೆ. ನಿರೀಕ್ಷೆ ಮೀರಿದಂತೆ ಮೀನು ಬೆಳವಣಿಗೆ ಕಾಣುತ್ತಿದ್ದು ನಮ್ಮ ನಿರೀಕ್ಷೆಯಂತೆ 50 ಲಕ್ಷ ರೂ. ಆದಾಯ ಸಿಗುವ ಸಾಧ್ಯತೆ ಇದೆ ಎಂದು ಯುವ ರೈತ ಹೇಳಿದರು.

ವಾರದಲ್ಲಿ 2 ರಿಂದ 3 ಬಾರಿ ನೀರನ್ನು ಬದಲಾಯಿಸುವ ಮೂಲಕ ತಿಳಿಗೊಳಿಸಲಾಗುತ್ತದೆ. ಆ ಬದಲಾಯಿಸುವ ನೀರನ್ನು ಮರ-ಗಿಡಗಳಿಗೆ ಮತ್ತು ಕೃಷಿ ಚಟುವಟಿಕೆಗೆ ಬಳಸಲಾಗುತ್ತದೆ.

ಸಾವಯವ ಹಾಗು ಸಮಗ್ರ ಕೃಷಿ ಜೊತೆಗೆ ಆರ್ಥಿಕ ವ್ಯವಸ್ಥೆ ಸಲುವಾಗಿ ಉಪ ಕಸುಬುಗಳನ್ನು ಅಳವಡಿಸಿಕೊಂಡಲ್ಲಿ ಬದುಕನ್ನು ಆರ್ಥಿಕವಾಗಿ ಸದೃಢಗೊಳಿಸಿಕೊಳ್ಳಬಹುದು. ಸದ್ಯ ಮೀನು ಸಾಕಾಣಿಕೆಯಲ್ಲಿ ನಿರತನಾಗಿದ್ದೇನೆ. ಈಗಾಗಲೇ 22 ಲಕ್ಷ ರೂ. ಖರ್ಚಾಗಿದ್ದು 50 ಲಕ್ಷ ರೂ. ಆದಾಯದ ನಿರೀಕ್ಷೆ ಇದೆ ಎಂದು ಕೆ. ಪೃಥ್ವಿಕುಮಾರ್ ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK